Mr. SPEAKER.—I believe the 'Agriculture Demand' is coming up for discussion in the course of the Debate, and so, I have disallowed it.

Sri SANJEEVANATH AIKALA (Suratkal).—Sir, there are still ten minutes left for the Question Hour. Question No. 508 about Mariamma Temples is an important question and may please be taken up.

Mr. SPEAKER.—There are other questions also, and I cannot make a distinction.

Sri C. J. MUCKANNAPPA (Sira).—Sir, when I requested the Hon'ble Chief Minister about his Mission to Delhi, he had promised that he would make a statement on the 18th.

Sri S. NIJALINGAPPA (Chief Minister).—Sir, I had stated that I would make a statement in reply to the Debate which is going to be on the 18th. The reply will be given either to-day or to-morrow.

BUDGET ESTIMATES FOR 1963-64—DEMANDS FOR GRANTS.

(Debate continued.)

Sri P. F. D'MELLOW (Nominated).—Mr. Speaker, Sir, when the house ose last Saturday, I was about to remark that it was a pity to find so many young people in this State disfigured and mutilated as the result of Hansen's disease or Leprosy as it is better known. Is there any reason why we should lag behind other States by not providing ourselves with facilities for surgical repair and rehabilitation of such patients? I am told that there is a hospital in Mysore City which is willing to undertake such work, if it could be provided with the means to acquire the additional accommodation that it needs for in-patients stricken by leprosy. I ask our Hon'ble Health Minister to please examine the possibility of providing such accommodation.

Sir, while on the subject of Hansen's disease, I am not sure whether we possess the authority to separate children of parents found with active disease. It has been long established that in India the greater majority of Leprosy patients are infected before their 20th year, many even before their 15th year. So, if we could only provide for the children of patients suffering from active or open leprosy to be separated from their parents and taken care of in suitable schools, there is no reason why we should not succeed in finally eradicating the disease of leprosy from our midst.

Sir, I shall now revert to the subject of the 'care of the Aged'. I do not claim that there is anything particularly original in what I suggest. But as one who has spent some time in this particular field of medicine, I have never ceased to hope that somebody we in this country will have a Plan of our own, one that concerns every one of intimately, for we all hope one day, to be happy in our old age.

(Sri P. F. D'MELLOW)

Sir, with our eyes rivetted on that future we plan to build for the country, we are apt to overlook a problem that grows more acute every year, and one that should concern us both as citizens, and tax-payers. The problem of our Aged citizen, who thanks to advances in both preventive and curative medicine, better housing, nutrition and the rise in the general standard of living, will remain with us very longer than they used to in years gone by.

I should like to offer to our Hon'ble Minister for Health, the suggestion that he appoints a Committee on the lines of that which produced a valuable report in 1949, on behalf of the British Medical Association, a blue print for the "Care and Treatment of the Aged and Infirm" in the United Kingdom.

We are shortly to have yet another medical college and hospital in Bangalore, one for which a large sum of money has been made available from the private sector. I now ask the Government, to invite the Governing Body of the new St. John's Medical College and Hospital to accept the responsibility of undertaking comprehensive research in the subject of *Geriatrics*, and help both the State and the country to evolve a Plan of its own, one that will later allow for the establishment of geriatric departments in all our lyrger hospitals, working in co-operation with such voluntary agencies as are willing to undertake the "After care" of the "long stay geriatric patient".

Mr. SPEAKER.—I am convinced that there is enormous scope for research in the peculiar ways in which diseases work out and the knowledge so gained can then be applied all over the country. Sir, I commend this for the serious consideration of Government and I hope that when he comes to reply to this debate, the Hon'ble Minister for Health will find it possible to hold out some such hope and promise to the increasingly large population of the Aged who have come to make their homes in the salubrious climate of Mysore State.

There remain one more point which I should like to mention, and that is while I have had no personal experience of such, I have heard from medical colleagues of their experiences in coming across many undesirable side effects and sequel in the matter of mass vaccination against small pox. My Hon'ble colleague Dr. Gowdiah appears to be aware of such instances, and I would suggest that our Public health authorities cause an enquiry into the causes, if only to ensure that the campaign for eradication of small pox does not suffer.

Before concluding I should like to touch on the decision to introduce the mid-day meals scheme in our schools.

As we are all aware, recent surveys have revealed serious protein deficiency in the children of poorer families in this State and so I hope the need to supplement this deficiency will be kept in mind. More than quantity of food comes the manner of its presentation and variation combined with scrupulous cleanliness in its preparation and our Health Department must be associated with this scheme in all its stages.

I should like to conclude with one more request. The Hon'ble Minister 12 months ago held out a hope of a hospital for aged incurables within two years. I sincerely trust that today when he replies he is going to give us an assurance that we are indeed 12 months nearer.

ಶ್ರೀ ಸಂಜೀವನಾಥ ಐಕಲ (ಸುರತ್‌ಕಲ್).—ಮಾನ್ಯ ಸಭಾಪತಿಗಳೇ ನಾನು ಇದೇ ಮೆಡಿಕಲ್ ಡಿಮ್ಯಾಂಡಿನ ವಿಷಯದಲ್ಲಿ ಕಳೆದ ವರ್ಷ ಮಾತನಾಡುವಾಗ ಆಯುರ್ವೇದದ ಅಭಿವೃದ್ಧಿಗೆ ಆಯುರ್ವೇದ ಶಾಲೆಗಳಿಗೆ, ಆಯುರ್ವೇದ ಕಾಲೇಜುಗಳಿಗೆ ಮತ್ತು ಆಯುರ್ವೇದ ಸಂಸ್ಥೆಗಳಿಗೆ ಸರ್ಕಾರದವರು ತೋರಿಸುತ್ತಿರುವ ಮಲತಾಯಿ ಧೋರಣೆಯನ್ನು ಕುರಿತು ಮಾತನಾಡಿದ್ದೆ. ಒಂದು ವರ್ಷದ ಅವಧಿಯಲ್ಲಿ ನಾವು ಹೇಳಿದಂಥಾ ಅಭಿಪ್ರಾಯಗಳನ್ನು ಸರ್ಕಾರದವರು ತಿಳಿದು ಕೊಂಡು ಅದರಲ್ಲಿ ಅನುಸರಿಸಬೇಕಾದ ಯಾವ ಕಾರ್ಯಕ್ರಮಗಳಿವೆ, ಯಾವ ತಮ್ಮ ಧೋರಣೆಗಳಿವೆ ಅವುಗಳನ್ನು ಬದಲಾಯಿಸಿ ಆಯುರ್ವೇದಕ್ಕೆ ಒದಗಿಸಬೇಕಾದ ಹಣವನ್ನು ಮತ್ತು ಇತರ ಸೌಲಭ್ಯ ಗಳನ್ನು ಸರ್ಕಾರದವರು ಒದಗಿಸಿ ಆಯುರ್ವೇದ ಶಾಸ್ತ್ರಕ್ಕೆ ನ್ಯಾಯ ಸಮ್ಮತವಾಗಿ ಯಾವ ಸಹಾಯ ಸೌಲಭ್ಯಗಳು ಸಿಕ್ಕಬೇಕೋ ಅವುಗಳು ಸಿಕ್ಕಬಹುದು ಎಂದು ನಾನು ಆಶಿಸಿದ್ದೆ. ಆದರೆ ಈ ಒಂದು ವರ್ಷದ ಅವಧಿಯಲ್ಲಿ ಈ ಆಯುರ್ವೇದ ಶಾಸ್ತ್ರದಬಾಬಿಗೆ ಸರ್ಕಾರದವರು ಮಾಡಿರತಕ್ಕ ಸಹಾಯ ಸೌಲಭ್ಯಗಳನ್ನು ನೋಡಿದರೆ ಮಲತಾಯಿ ಧೋರಣೆ ಹೆಚ್ಚಾಗಿದೆ. ಯಾವ ರೀತಿಯಲ್ಲೂ ಅದನ್ನು ನಿವಾರಣೆ ಮಾಡಲು ಪ್ರಯತ್ನಿಸಿರುವಂಥ ಅಂಶಗಳು ಕಂಡು ಬರುವುದಿಲ್ಲ. ಈ ಆಯುರ್ವೇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಆಕ್ಟನ್ನು ತಯಾರಿಸಿ ಅದರಲ್ಲಿ ಈ ಆಯುರ್ವೇದದ ಅಭಿವೃದ್ಧಿಗೆ ಬೇಕಾ ದಂಥ ಅನೇಕ ಸೌಲತ್ತುಗಳನ್ನು ಸೂಚಿಸಲಾಗಿದೆ. ಆ ಆಕ್ಟಿನಲ್ಲಿರುವ ಅನೇಕ ಸೌಲತ್ತುಗಳನ್ನು ಸರ್ಕಾರ ಜಾರಿಗೆ ತರುವುದರಲ್ಲಿ ತುಂಬಾ ಅಸಮರ್ಥನೀಯವಾಗಿದೆ. ಆಯುರ್ವೇದ ಶಾಸ್ತ್ರಕ್ಕೆ ಸಂಬಂಧಪಟ್ಟ ಹಾಗೆ ಒಂದು ಬೋರ್ಡನ್ನು ನೇಮಿಸಬೇಕೆಂದು ಆ ಶಾಸನದಲ್ಲಿ ಸೂಚಿಸಿದೆ. ಇಲ್ಲಿಯ ತನಕ ಆ ಬೋರ್ಡನ್ನು ನೇಮಿಸುವ ಯಾವ ಒಂದು ಕಾರ್ಯಕ್ರಮವನ್ನೂ ಸರ್ಕಾರದವರು ಕೈಗೊಂಡಿಲ್ಲ. ಈ ಆಯುರ್ವೇದದ ಬಗ್ಗೆ ಡೈರೆಕ್ಟರ್ ಆಫ್ ಆಯುರ್ವೇದ ಮೆಡಿಸಿನ್ ಎಂದು ಒಂದು ಪ್ರತ್ಯೇಕವಾದ ಪೋಸ್ಟನ್ನು ಮಾಡಬೇಕೆಂದು ಶಾಸನದಲ್ಲಿ ಸೂಚಿಸಿದೆ ಅದನ್ನು ಸಹ ಸರ್ಕಾರ ದವರು ಈ ತನಕ ಮಾಡಿಲ್ಲ. ಒಬ್ಬ ಪ್ರತ್ಯೇಕ ಆಯುರ್ವೇದ ಡೈರೆಕ್ಟರನ್ನು ಇದುವರೆಗೂ ನೇಮಿಸಿಲ್ಲ.

ಇನ್ನು ಆಯುರ್ವೇದ ಡಿಸ್‌ಪೆನ್ಸರಿಗಳ ವಿಷಯದಲ್ಲಿ ಹೇಳುವುದಾದರೆ ಸರ್ಕಾರದವರು ನಡೆಸುತ್ತಿರುವ ಆಯುರ್ವೇದ ಆಸ್ಪತ್ರೆಗಳಲ್ಲಿ ಅಲ್ಲಿನ ಪರಿಸ್ಥಿತಿಯನ್ನು ನೋಡಿದರೆ ಸರ್ಕಾರದವರು ಏತಕ್ಕೆ ಈ ರೀತಿಯಲ್ಲಿ ಬೇಜವಾಬ್ದಾರಿಯಿಂದ ಈ ಬಾಬನ್ನು ನೋಡುತ್ತಿದ್ದಾರೋ ಎಂದು ಮನಸ್ಸಿಗೆ ಖೇದವಾಗುತ್ತಿದೆ.

ನಮ್ಮ ಪ್ರಾಂತ್ಯದಲ್ಲಿ ಅನೇಕ ಆಯುರ್ವೇದ ಡಿಸ್‌ಪೆನ್ಸರಿಗಳು ಇವೆ ; ಒಂದೆರಡು ಆಯುರ್ವೇದ ಹಾಸ್ಪಿಟಲುಗಳಿವೆ, ಒಂದು ಆಯುರ್ವೇದ ಕಾಲೇಜಿದೆ. ಮೈಸೂರಿನಲ್ಲಿರುವಂತೆ ಒಂದು ಆಯುರ್ವೇದ ಕಾಲೇಜು (School of Indian Medicine) ಇಲ್ಲದೆ, ಈ ಪದ್ಧತಿಯನ್ನು ಕಲಿಸಲಿಕ್ಕೆ ಬೇಕಾದ ಅನುಕೂಲತೆಗಳಿಲ್ಲ; ಕಟ್ಟಡಗಳೂ ಇಲ್ಲ; ಕಲಿಸಲಿಕ್ಕೆ ಬೇಕಾದ equipments ಗಳು ತುಂಬ ಕಡಿಮೆ ಇವೆ. ಕೇವಲ ಯಾವುದೇ ಒಂದು ಪುರಾತನ ಸಂಪ್ರದಾಯಕ್ಕೆ ಕಟ್ಟು ಬಿದ್ದು, ನಮ್ಮ ಪಾಲಿಗೆ ಇದು ಬಂದುಬಿಟ್ಟಿದೆ, ಅನುಭವಿಸೋಣ ಅನ್ನುವಹಾಗಿದೆ ; ಕೆಳಗಡೆ ನೀರಿನಿಂದಲೇ ಸಂತೃಪ್ತಿಗೊಳ್ಳಲಿ ಎಂದು ಸರ್ಕಾರ ಭಾವಿಸಿಕೊಂಡಹಾಗಿದೆ. ಬಜೆಟ್ಟಿನಲ್ಲಿ ಆಯುರ್ವೇದಕ್ಕೆ ಇಟ್ಟಿರುವ ಹಣ ನೋಡಿ ದರೆ ಈ ರೀತಿ ನಡೆದಿದೆ ಎಂದು ಕಾಣುತ್ತದೆ.

2.00 P.M.

ಆಯುರ್ವೇದ ಪದ್ಧತಿಯಿಂದ ಚಿಕಿತ್ಸೆ ಹೊಂದುವಷ್ಟು, ಗುಣವಾಗುವಷ್ಟು ಮಂದಿ, ಅಲೋಪತಿ ಯಲ್ಲಿ ಇಲ್ಲ. ನಮ್ಮ ದೌರಾದೃಷ್ಟವೇನೋ, ಹೆಲ್ತ್ ಮಿನಿಷ್ಟರಾಗುವಂಥವರೆಲ್ಲಾ ಅಲೋಪತಿ ಡಾಕ್ಟರೇ ಆಗಿದ್ದಾರೆ, western system of medicine ಕಲಿತಂಥವರೇ ಆಗಿದ್ದಾರೆ. ಅಲೋ ಪತಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರೇ ಹೆಲ್ತ್ ಮಿನಿಸ್ಟರುಗಳಾಗಿರುವುದರಿಂದ ಆಯುರ್ವೇದ ಪದ್ಧತಿಯ, ಸಂಸ್ಕೃತಿಯ ಜೀವನದಲ್ಲಿ ಒಂದು ಹೊಸ ಕ್ರಾಂತಿಯನ್ನು ಹುಟ್ಟಿಸಲು ಸಾಧ್ಯವಾಗಿಲ್ಲ. ಆಯುರ್ವೇದ ಪದ್ಧತಿಯ ಗಂಧವೇ ಗೊತ್ತಿಲ್ಲದವರು ಈ ಇಲಾಖೆಯ ಮಂತ್ರಿಗಳಾಗುವುದರಿಂದ ಸ್ವಾಭಾವಿಕವಾಗಿ ಈ ಪದ್ಧತಿಗೆ ಪ್ರೋತ್ಸಾಹ ಕೊಡದಂಥ ಮನಸ್ಸು ಉತ್ಪನ್ನವಾಗುತ್ತದೆ.

ಆಯುರ್ವೇದ ಪದ್ಧತಿ ಕೇವಲ ಒಂದು ಔಷಧಿ, ಮಾತ್ರೆ, ಕಷಾಯ ಕೊಡುವ system ಅಲ್ಲ. ಅದು ಒಂದು science of life, ಜೀವಂತ ಶಾಸ್ತ್ರ ತಿಳಿಸುವ ದೊಡ್ಡ ಶಾಸ್ತ್ರ. ಆ ಶಾಸ್ತ್ರದಲ್ಲಿ ನಮ್ಮ

(ಶ್ರೀ ಸಂಜೀವನಾಥ ಐಕಳ)

ದೇಶದ ಸಂಸ್ಕೃತಿ ಪರಂಪರೆಯಾಗಿ ಬೆಳೆದು ಕೊಂಡು ಬಂದಿದೆ. ಈ ಪದ್ಧತಿಗೆ ಅಂಥ ದೊಡ್ಡ ಪರಂಪರೆಯಾದ ಹಿನ್ನೆಲೆ ಇರುತ್ತದೆ. ಸರ್ಕಾರ ಈ ಪದ್ಧತಿಗೆ ಮಲತಾಯಿ ಧೋರಣೆ ತೋರಿಸುತ್ತಲೇ ಬೆಳೆದು ಕೊಂಡು ಬಂದಿದೆ. ಈ ಒಂದು ಪದ್ಧತಿಯಿಂದ ನಮ್ಮ ದೇಶದ ಹಳ್ಳಿಗಳಲ್ಲಿರುವ ಬಹು ಜನರಿಗೆ ಪ್ರಯೋಜನ ದೊರಕಬೇಕಾದರೆ ಸರ್ಕಾರ ಅದಕ್ಕೆ ಪ್ರೋತ್ಸಾಹ ಕೊಟ್ಟು ಅದನ್ನು ಬೆಳೆಸಬೇಕು. ಅದರಿಂದ ಭಯದ ರೀತಿಯಲ್ಲಿ ಚಿಕಿತ್ಸೆ ಪಡೆಯುವ ಅಗತ್ಯವಿಲ್ಲ. ಈ ಪದ್ಧತಿಯ ಬಗ್ಗೆ ಆ ಅಭಿಪ್ರಾಯ ಇದ್ದರೆ, ಹಾಗೆಯೇ ತೀರ್ಮಾನ ತೆಗೆದುಕೊಂಡು ಈ ಪದ್ಧತಿಯ ಶಾಲೆಗಳನ್ನೂ, ಹಾಸ್ಪೆಟಲುಗಳನ್ನೂ, ಕಾಲೇಜುಗಳನ್ನೂ ಮುಚ್ಚಬಿಡಿರಿ. ಈ ರೀತಿ ಅರ್ಧಂಬರ್ಧ ಸಹಾಯಮಾಡಿ, ಈ ಪದ್ಧತಿಯಿಂದ ಚಿಕಿತ್ಸೆ ಕೊಡಿಸಿದರೆ ಉಪಯೋಗವಿಲ್ಲ ಎಂಬ ಅಪವಾದವನ್ನು ಹೊರಿಸುವುದು ಸರಿಯಲ್ಲ. ಹಲವರು ಹೇಳಿದಹಾಗೆ, ಎರಡು ಮಕ್ಕಳಿದ್ದರೆ, ಒಂದು ಮಗುವಿಗೆ ಬೇಕಾದ ತಿಂಡಿ ತೀರ್ಥಗಳನ್ನು ಕೊಟ್ಟು ಪೋಷಣೆಮಾಡಿ ಇನ್ನೊಂದು ಮಗುವಿಗೆ ಏನೂ ಆಧಾರ ಸೌಕರ್ಯ ಕೊಡದೆ, "ನೋಡಿ, ಈ ಅಲೋಪತಿ ಮಗು ಹೇಗೆ ಪುಷ್ಟಿಯಾಗಿ ಬೆಳೆಯುತ್ತದೆ, ಆದೇ ಆಯುರ್ವೇದ ಮಗು ಕ್ಷೀಣವಾಗಿದೆ" ಎಂದು ಹೇಳುವುದು ಯೋಗ್ಯ ಸಾಮ್ಯ (comparison) ಅಲ್ಲ ಸರ್ಕಾರದವರು ಆಯುರ್ವೇದ ಪದ್ಧತಿಗೆ ಇಷ್ಟರವರೆಗೆ ತೋರಿಸಿದ ಧೋರಣೆಯನ್ನು ಮುಂದಕ್ಕೆ ತಿದ್ದಿಕೊಂಡು ಅದಕ್ಕೂ ಯೋಗ್ಯ ರೀತಿಯಲ್ಲಿ ಬೆಳೆಯುವಂತೆ ಅನುಕೂಲ ಮಾಡಿ ಕೊಡಬೇಕೆಂಬುದು ನನ್ನ ಆಸೆ.

ಇನ್ನು ಆಯುರ್ವೇದ ಪದ್ಧತಿಯನ್ನು ಪ್ರಾಕ್ಟೀಸ್ ಮಾಡತಕ್ಕಂಥ ಅನೇಕ ಪಂಡಿತರುಗಳ ಅವಸ್ಥೆ ಬಹಳ ಬೇಸರಕರವಾಗಿದೆ. ಅವರು ಮಾರುವಂಥ, ತಯಾರಿಸುವಂಥ ಭಸ್ಮ, ಇತರ ಮಾತ್ರೆಗಳಿಗೆ, ರಸಾಯನಕ್ಕೆ ಲೆಕ್ಕ ಇಡಬೇಕೆಂದು ಸರ್ಕಾರದ ಆಜ್ಞೆಯಾಗಿದೆ. ಇದರಿಂದ ಈ ಪಂಡಿತರುಗಳಿಗೆ ಬಹಳ ಕಠಿಣ ಸನ್ನಿವೇಶ ಒದಗಿದೆ. ಹಳ್ಳಿಗಳಲ್ಲಿ ವಂಶಪಾರಂಪರ್ಯವಾಗಿ ಈ ಆಯುರ್ವೇದ ಚಿಕಿತ್ಸೆಯನ್ನು ನಡೆಸಿಕೊಂಡು ಬಂದಿರುವವರೂ ಪಂಡಿತರುಗಳ ಮೇಲೆ ಇಂಥ ಒಂದು ಕಷ್ಟಕರವಾದ ಆಜ್ಞೆಯನ್ನು ಹಾಕುವುದು ತಪ್ಪು. "ಅಷ್ಟರಿಷ್ಟ"ದಲ್ಲಿ, ಯಾವವಿಧದಲ್ಲಿಯೂ ಪ್ರೊಹಿಬಿಷನ್ನಿಗೆ ವಿರುದ್ಧವಾದ ಆಲ್ಕೋಹಾಲುಗಳು ಇರುವುದಿಲ್ಲ. ಆದರೆ ನಮ್ಮ ಸರ್ಕಾರದವರು ಈ "ಅಷ್ಟರಿಷ್ಟ"ದಲ್ಲಿ ಆಲ್ಕೋಹಾಲ್ ಇದೆಯೆಂದು ತಿಳಿದುಕೊಂಡು ಇದನ್ನು ತಯಾರಿಸುವಂಥವರು ಲೆಕ್ಕ ಇಟ್ಟುಕೊಳ್ಳಬೇಕೆಂದು ಹೇಳಿದ್ದಾರೆ, ಇದರಿಂದ ಪಂಡಿತರೊಳಗೆ ಬಹಳ ದೊಡ್ಡದಾದ ಕಷ್ಟವಾಗಿದೆ. ಆ ಔಷಧಿ ಮೇಲೆ ಹಾಕಿರುವ ಆಜ್ಞೆ ಬಹಳ ಅನ್ಯಾಯ.

ಅಷ್ಟೋ ಕಡೆಗಳಲ್ಲಿ ಹಳ್ಳಿಗಳಲ್ಲಿ ಆಯುರ್ವೇದ ಪಂಡಿತರುಗಳು, ಪಾಶ್ಚಾತ್ಯ ಪದ್ಧತಿಯಲ್ಲಿ ಗುಣವಾಗದ ತುಂಬಾ ಭಯಂಕರವಾದ cronic case ಗಳನ್ನು, ಗುಣ ಮಾಡುವುದರಲ್ಲಿ ಹೆಸರು ಪಡೆದಿದ್ದಾರೆ. ಇಂಥ ಎಷ್ಟೋ ಪಂಡಿತರುಗಳು ಹಳ್ಳಿಗಳಲ್ಲಿ ಇರುತ್ತಾರೆ. ಈಗ ಸರ್ಕಾರದವರು ಅವರಮೇಲೆ ಹೊರಿಸಿರುವ ಆಜ್ಞೆಯಿಂದ ಬಹಳ ತೊಂದರೆಯಾಗಿ, ದೊಡ್ಡ ದೊಡ್ಡ ಆಯುರ್ವೇದ ಪಂಡಿತರುಗಳು practice ಮಾಡಲಿಕ್ಕೆ ಅನುಕೂಲವಾಗದೆ ಅವರುಗಳಿಂದ ಜನಗಳಿಗೆ ದೊರಕುತ್ತಿದ್ದ ಯೋಗ್ಯ ಸಹಾಯವು ತಪ್ಪಿಹೋಗುತ್ತದೆ. ಇನ್ನು ಮುಂದಾದರೂ ಆಯುರ್ವೇದ ಪದ್ಧತಿ ಬದುಕಿಕೊಳ್ಳಬೇಕಾದರೆ, ಉಳಿಯಬೇಕಾಗಿದ್ದರೆ, ಹಳ್ಳಿಗಾಡಿನ ಜನರಿಗೆ ಅವರಿಂದ ಚಿಕಿತ್ಸೆ ಸಿಗಬೇಕಾಗಿದ್ದರೆ, ಈ ಪಂಡಿತರುಗಳ ಸಂಸ್ಕೃತಿ ಶಕ್ತಿ ಬೆಳೆಯಲು ಅವಕಾಶ ಕೊಟ್ಟು, ಈ ಪದ್ಧತಿಗೆ ಯೋಗ್ಯವಾದ ಹಣ ಸಹಾಯವಾಗಬೇಕು ಪಾಶ್ಚಾತ್ತ್ಯ ಪದ್ಧತಿಗೆ 100 ರೂಪಾಯಿ ಖರ್ಚು ಮಾಡಿದರೆ, ಆಯುರ್ವೇದ ಡಿಸ್‌ಪೆನ್ಸರಿಗಳಿಗೆ, ಹಾಸ್ಪಟಲ್‌ಗಳಿಗೆ, ಕಾಲೇಜುಗಳಿಗೆ ಅದರ ಶೇಕಡ ಮೂರರಷ್ಟು ಖರ್ಚು ಮಾಡುತ್ತೀರೆಂದರೆ, ಆಯುರ್ವೇದ ಪದ್ಧತಿ ಮೇಲೆ ಎಷ್ಟು ಕಮ್ಮಿ ಹಣ ಖರ್ಚು ಮಾಡುತ್ತೀರಿ? ಇಷ್ಟು ಕಮ್ಮಿ ಖರ್ಚು ಮಾಡಿದರೆ ಆಯುರ್ವೇದ ಪದ್ಧತಿ ಯಾವ ರೀತಿಯಲ್ಲಿ ಬೆಳೆಯುತ್ತದೆ?

ಈ ಡಿಪಾರ್ಟ್‌ಮೆಂಟಿನಲ್ಲಿರುವ ಲೋಪ ದೋಷಗಳನ್ನು ಕುರಿತು ಮಾತನಾಡುವುದಾದರೆ, ಒಂದು ವಿಷಯ ಹೇಳಬೇಕಾಗಿದೆ. ಬೆಂಗಳೂರಿನಲ್ಲಿ ಚಾಮರಾಜ ಪೇಟೆಯಲ್ಲಿ ನರ್ಸುಗಳಿಗಾಗಿ ಹೆಚ್ಚು ಕಡಿಮೆ 340 ಕೋಣೆಗಳನ್ನೊಳಗೊಂಡ 2-3 ಕಟ್ಟಡಗಳನ್ನು ಕಟ್ಟಿದ್ದಾರೆ. ಈ ಕಟ್ಟಡಗಳ ಕೆಲಸ ಪೂರ್ತಿಯಾಗಿ ಆರೇಳು ತಿಂಗಳುಗಳು ಆಯಿತು. ಎಲೆಕ್ಟ್ರಿಸಿಟಿ ಕೆಲಸ, ನೀರು ಸರಬರಾಜು ಎಲ್ಲಾ ಆಗಿದೆ. ಆದರೆ ನರ್ಸುಗಳನ್ನು ಅಲ್ಲಿಗೆ ಸ್ಥಳಾಂತರಿಸಲಿಲ್ಲ. ಅದರ ಬದಲು ಕೆಲವು ಕೋಣೆಗಳಲ್ಲಿ post-graduate ಗಳನ್ನು ನಿಲ್ಲಲು ಹೇಳಿದ್ದಾರೆ. ಕಾರಣವೇನೆಂದರೆ, ನರ್ಸುಗಳು ಅಲ್ಲಿ ಕಟ್ಟಿರುವ ಬ್ಲಾಕುಗಳು ಬಹಳ ಸಣ್ಣದಾಗಿವೆ ಎಂದು ಹೇಳಿ, ಹೋಗಲಿಕ್ಕೆ ಇಷ್ಟಪಡಲಿಲ್ಲ. ಸರ್ಕಾರದವರು ಇಂಜನಿಯರುಗಳನ್ನು consult ಮಾಡಿ ನಿರ್ಮಿಸಿದಂಥ ಇಂಥ ಕಟ್ಟಡಗಳಿಗೆ, ಅವರ ಕೈಕೆಳಗಿರುವ ನರ್ಸುಗಳು ಹೋಗುವುದಿಲ್ಲವೆಂದರೆ ಅರ್ಥವೇನು? ನರ್ಸುಗಳಿಗಾಗಿ ಅನುಕೂಲವಾಗು

ವಂಥ ತಯಾರಿಸಿದ ಕಟ್ಟಡವನ್ನು ನರ್ಸುಗಳಮೇಲೆ ಸರ್ಕಾರದವರು ಹೊರಿಸಲು ಅಸಮರ್ಥರಾದುದು ಬೇಸರಕರವಾದ ಸಂಗತಿ.

ತಾಲ್ಲೂಕು ಬೋರ್ಡ್ ಆಸ್ಪತ್ರೆಗಳ ವಿಷಯ ಈ ಮಾನ್ಯ ಸಭೆಯಲ್ಲಿ ಮೊನ್ನೆ ಸದಸ್ಯರು ಮಾತನಾಡುತ್ತಾ, ಅಲ್ಲಿ ಇರುವಂಥ ಔಷಧಗಳ ಅನಾನುಕೂಲತೆಗಳನ್ನು ಸರಿಪಡಿಸದೆ ಇರುವುದರಿಂದ ಅನೇಕ ರೀತಿಯ ತೊಂದರೆಗಳಾಗುತ್ತವೆ ಎಂದು ಹೇಳಿದರು. ಇಂಥ ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ವೈದ್ಯಕೀಯ ಅಧಿಕಾರಿಗಳು ಯಾರಿದ್ದಾರೆಯೋ ಅವರಿಗೆ ಸಲ್ಲುತ್ತಾ ಇರುವಂಥ ವೇತನ ಬಹಳ ಕೆಳಮಟ್ಟದ್ದು ಇದೆ. ಅಂಥ ಕಡೆಗಳಲ್ಲಿ ಕೆಲಸ ಮಾಡಲು ಡಾಕ್ಟರುಗಳು ನಿಜವಾಗಿ ಅಪೇಕ್ಷಿಸುವುದಿಲ್ಲ ಎಂದು ಈ ಸಭೆಯ ತುಂಬ ಸದಸ್ಯರು ಹೇಳಿದರು. ಅದು ನಿಜ: ಹಳ್ಳಿಗಾಡಿನ ಆಸ್ಪತ್ರೆಗಳಿಗೆ ಅಥವಾ ತಾಲ್ಲೂಕು ಹೆಡ್‌ಕ್ವಾರ್ಟರ್‌ಗಳಲ್ಲಿರುವ ಆಸ್ಪತ್ರೆಗಳಿಗೆ ಡಾಕ್ಟರುಗಳು ಹೋಗಲಿಕ್ಕೆ ಒಡಂಬಡುವುದಿಲ್ಲ. ಅಲ್ಲಿ ಕೊಡತಕ್ಕ ವೇತನ ಮತ್ತು ಇತರ ಸೌಲಭ್ಯಗಳು ಬಹಳ ಕಡಿಮೆಯಾಗಿವೆ.

ಈ ವೇತನ ನಿರ್ಣಯದಲ್ಲಿ ಒಂದು ಸುಧಾರಣೆಯನ್ನು ಮಾಡಬೇಕೆಂದು ನಾನು ಇಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಫ್ಯಾಮಿಲಿ ಪ್ಲಾನಿಂಗ್ ವಿಚಾರದ ಬಗ್ಗೆ ಸರ್ಕಾರದವರ ಕ್ರಮವನ್ನು ಕುರಿತು ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಯೋಜನೆಯ ತಾತ್ವಿಕ ಹಿನ್ನಲೆಯನ್ನು ನಾನು ಈಗ ಚರ್ಚಿಸುವುದಿಲ್ಲ. ಇವತ್ತು ಸರ್ಕಾರದವರು ಈ ವಿಚಾರದಲ್ಲಿ ತೆಗೆದುಕೊಳ್ಳುತ್ತಿರುವ ಕಾರ್ಯಕ್ರಮದ ದೃಷ್ಟಿಯನ್ನು ನೋಡುವುದಾದರೆ ಈ ಫ್ಯಾಮಿಲಿ ಪ್ಲಾನಿಂಗ್ ಅಥವಾ ಕುಟುಂಬ ನಿಯಂತ್ರಣ ಯೋಜನೆಯನ್ನು ಕಾರ್ಯಗತ ಮಾಡುವುದೇ ಒಂದು ದೊಡ್ಡ ಕಾರ್ಯಕ್ರಮ ಸರ್ಕಾರದವರಿಗೆ ಆಗಿ ಹೋಗಿದೆ. ನಾವು ಒಂದು ಗಾದೆಯನ್ನು ಆಗಾಗ್ಗೆ ಕೇಳುತ್ತಿರುತ್ತೇವೆ. ಅದೇನೆಂದರೆ "ಉಂಟು ಮಾಡಿದ ದೇವರು ಊಟಕೊಡದೆ ಇರಲಾರ" ಎಂದು ಮಕ್ಕಳು ಎಷ್ಟಾದರೂ ಆಗಲಿ. ಉದಾಹರಣೆಗಾಗಿ ಮನುಷ್ಯನಿಗೆ ಒಂದು ಬಾಯಿ ಇದೆ ಎರಡು ಕೈಗಳಿವೆ ಎರಡು ಕೈಗಳಿಗೆ 10 ಬೆರಳುಗಳಿವೆ. ಹಾಗೆ ದೇಶದಲ್ಲಿ ಸಂತಾನ ಜಾಸ್ತಿಯಾದರೆ ಅದರಿಂದೇನೂ ತೊಂದರೆಯಾಗಲಿಕ್ಕಿಲ್ಲ. ಆದರೆ ಸರ್ಕಾರದವರು ಏನೋ ಒಂದು ಆಧಾರದ ಮೇಲೆ ಕುಟುಂಬ ನಿಯಂತ್ರಣ ಯೋಜನೆಯನ್ನು ಜಾರಿ ಮಾಡಬೇಕೆಂದು ಒಂದು ಕಾಯಿದೆಗೆ ಬಲಬದ್ಧರಾಗಿ ಈ ಯೋಜನೆಯನ್ನು ಅಪ್ರಾಸಂಗಿಕವಾದ ರೀತಿಯಲ್ಲಿ ನಡೆಸಿಕೊಂಡು ಬರುತ್ತಿದ್ದಾರೆ. ಇದರಲ್ಲಿ ಇತ್ತೀಚೆಗೆ ದುರ್ನೀತಿ ವ್ಯವಹಾರ ಜಾಸ್ತಿಯಾಗಿದೆ. ಇದಕ್ಕೆ ಬೇಕಾದ ಸೆಮಿನಾರ್‌ಗಳನ್ನು, ವಿಚಾರ ಗೋಷ್ಠಿಗಳನ್ನು, ಚರ್ಚಾ ಕೂಟಗಳನ್ನು ಮತ್ತು ಸ್ಟಡಿ-ಗ್ರೂಪ್‌ಗಳನ್ನು ಮಾಡಿಕೊಂಡು ಬೇರೆ ಹೋಗುತ್ತಿದ್ದಾರೆ. ಕುಟುಂಬ ನಿಯಂತ್ರಣ ಯೋಜನೆಗೆ ಈ ವ್ಯವಸ್ಥೆಗಳನ್ನು ಮಾಡುವುದರಲ್ಲೂ ತುಂಬಾ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).— ಬೇಜವಾಬ್ದಾರಿಯಿಂದಲ್ಲ; ಜವಾಬ್ದಾರಿಯಿಂದಲೇ ಅವನ್ನೆಲ್ಲಾ ಮಾಡುತ್ತಿದ್ದೇವೆ.

ಶ್ರೀ ಸಂಜೀವನಾಥ ಐಕಳ.—ಅಷ್ಟು ಬೇಜವಾಬ್ದಾರಿಯಿಂದ ಇವನ್ನೆಲ್ಲಾ ಮಾಡಲೇ ಬಾರದು. ಇದು ನಿಜವಾಗಿ ದುರ್ನೀತಿಗೆ ಎಡೆ ಕೊಟ್ಟ ಹಾಗಾಗುತ್ತದೆ. ಖಂಡಿತವಾಗಿ ಇದರ ಅವಶ್ಯಕತೆಯಿಲ್ಲ. ಈ ವಿಷಯವನ್ನು ಆಯಾ ವ್ಯಕ್ತಿಗಳಿಗೇ ಬಿಡುವುದು ಒಳ್ಳೆಯದು. ಕುಟುಂಬ ನಿಯಂತ್ರಣದ ಯೋಜನೆ ಬಗ್ಗೆ ಪ್ರಚಾರ ಮಾಡಬೇಕೆಂದು ಹೋಗುವುದು ಬಹಳ ಸಣ್ಣ ಕೆಲಸ. ಮುಖ್ಯವಾಗಿ ಇದನ್ನು ವ್ಯಕ್ತಿಯ ವಿಚಾರಕ್ಕೇ ಬಿಡಬೇಕು ಇನ್ನೂ ಕೆಲವು ಸಣ್ಣ ಸಂಘ ಸಂಸ್ಥೆಗಳಿವೆ. ಉದಾಹರಣೆಗೆ ಹೇಳುವುದಾದರೆ ಸೋಷಿಯಲ್ ವೆಲ್‌ಫೇರ್, ಭಾರತ ಸೇವಾ ಸಮಾಜ—ಇಂತಹುಗಳಿವೆ. ಇಂತಹ ಸಣ್ಣ ಸಾಮಾಜಿಕ ಕಾರ್ಯಕ್ಷೇತ್ರ ಸಂಘಗಳಿಗೆ ಆ ವಿಚಾರಗಳನ್ನು ಬಿಡಬೇಕು. ಸರ್ಕಾರದವರು ಇದಕ್ಕಾಗಿ ಒಂದು ಪ್ರತ್ಯೇಕ ಇಲಾಖೆಯನ್ನು ತೆರೆಯುವುದು, ಅಲ್ಲಿ ಸಾಕಷ್ಟು ಸಿಬ್ಬಂದಿಯನ್ನು ನೇಮಿಸಿಕೊಂಡು ಅವರಿಗೆ ಕಾಲ ಪರಿಸ್ಥಿತಿಗೆ ಅನುಗುಣವಾದ ಸಂಬಳವನ್ನು ಕೊಟ್ಟು, ಸರ್ಕಾರದ ಹಣವನ್ನು ನಷ್ಟ ಮಾಡಿಕೊಂಡು ದುರ್ನೀತಿ ಪ್ರಚಾರ ಮಾಡುವುದಕ್ಕೆ ಖರ್ಚು ಮಾಡುವುದು ನ್ಯಾಯವಾದುದಲ್ಲ. ಈ ಕುಟುಂಬ ನಿಯಂತ್ರಣದ ಯೋಜನೆ ಪ್ರಚಾರ ವಿಸಿದೆ ಇದನ್ನು ಸೆಮಿನಾರ್ ಮೂಲಕ ವಿಶೇಷವಾಗಿ ಮಾಡದೆ ಕೇವಲ ಸಣ್ಣ ಸಂಘ ಸಂಸ್ಥೆಗಳೇ ಈ ಯೋಜನಾ ಕ್ರಮವನ್ನು ಯೋಗ್ಯ ರೀತಿಯಲ್ಲಿ ನಡೆಸಿಕೊಂಡು ಹೋಗುವಂತೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರದವರನ್ನು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಎಷ್ಟೋ ಆಸ್ಪತ್ರೆಗಳಲ್ಲಿ ಆಯುರ್ವೇದ ಕಾಲೇಜು ನಡೆಸುವವರು ಅಲ್ಲಿ ವಿದ್ಯೆ ಕಲಿಯುವ ವಿದ್ಯಾರ್ಥಿಗಳಿಗೆ ಆ ಆಸ್ಪತ್ರೆಯಿಂದ ತಕ್ಕ ಸೌಲಭ್ಯಗಳನ್ನು ಒದಗಿಸಿ ಕೊಡಬೇಕೆಂದು ಕೇಳಿಕೊಂಡಿದ್ದೇನೆ. ಮೈಸೂರು ಪ್ರಾಂತದಲ್ಲಿ 10-11 ಆಯುರ್ವೇದಿಕ್ ಪ್ರೈವೇಟ್ ಕಾಲೇಜುಗಳಿವೆ. ಆ ಖಾಸಗೀ ಸಂಸ್ಥೆಯವರು ತಮ್ಮ ವಿದ್ಯಾರ್ಥಿಗಳನ್ನು ಅಂದರೆ ಅಲ್ಲ ಈ ವಿದ್ಯೆಯನ್ನು ಕಲಿಯುವ

(ಶ್ರೀ ಸಂಜೀವನಾಥ ಐಕಳ)

ವಿಧ್ಯಾರ್ಥಿಗಳಿಗೆ ಆಸ್ಪತ್ರೆಯ ಸೌಲಭ್ಯವನ್ನು ಒದಗಿಸಿ ಕೊಡಬೇಕೆಂದು ಕೇಳಿದ್ದಾರೆ. ಆದರೆ ಸರ್ಕಾರದವರು ಎಂ. ಬಿ. ಬಿ. ಎಸ್. ವಿಧ್ಯಾರ್ಥಿಗಳಿಗೆ ಈ ಸೌಕರ್ಯವನ್ನು ಒದಗಿಸುತ್ತಿರುವಂತೆ ಈ ಆಯುರ್ವೇದಿಕ್ ಕಾಲೇಜು ಆಸ್ಪತ್ರೆಗಳಲ್ಲಿಯೂ ಇಂತಹ ಅನುಕೂಲತೆಗಳನ್ನು ಏಕೆ ಒದಗಿಸಬಾರದು ಎಂಬುದಾಗಿ ನಾನು ಪ್ರಶ್ನೆ ಮಾಡುತ್ತೇನೆ. ಅವರಿಗೂ ಕೂಡ ಪ್ರಾಕ್ಟಿಕಲ್ ಟ್ರೈನಿಂಗ್ ಅನುಕೂಲತೆಯನ್ನು ಸರ್ಕಾರದವರು ಕೊಡುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಮಾದಯ್ಯ ಗೌಡ (ರಾಮನಗರಂ).—ಸ್ವಾಮಿ, ನಮ್ಮ ಮುಂದಿರತಕ್ಕ ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣೆಯ ಬೇಡಿಕೆಯನ್ನು ಸ್ವೀಕರಿಸುತ್ತಾ ಈ ವೈದ್ಯಕೀಯ ಮತ್ತು ಜನಾರೋಗ್ಯ ಇಲಾಖೆಗಳು ಒಂದು ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಾ ಇವೆ ಯೆಂದು ಹೇಳಿ ಈ ವಿಚಾರವಾಗಿ ನಾನು ಸರ್ಕಾರದವರನ್ನು ಅಭಿನಂದಿಸಲು ಇಚ್ಛೆಪಡುತ್ತೇನೆ. ನನಗೆ ಗೊತ್ತಿರುವ ಹಾಗೆ ಸುಮಾರು 40-50 ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ಸಾಂಕ್ರಾಮಿಕ ರೋಗಗಳು ಉಲ್ಬಣವಾಗಿ ಪ್ರತಿವರ್ಷವೂ ಪ್ಲೇಗು, ಕಾಲರಾ, ವಾಂತಿ ಭೇದಿ ಇತ್ಯಾದಿ ರೋಗಗಳಿಗೆ ಸಾವಿರಾರು ಜನ, ಲಕ್ಷಾಂತರ ಜನ ತುತ್ತಾಗುತ್ತಿದ್ದರು. ಅಂಥಾದ್ದನ್ನೆಲ್ಲಾ ಈ ದಿವಸ ತಡೆಹಿಡಿದು ನಿಲ್ಲಿಸಿದ್ದಾರೆ. ಈಗ ಸಾಂಕ್ರಾಮಿಕ ಜಾಡ್ಯಗಳು ದೇಶದಲ್ಲಿ ಕೇಳುವುದೇ ದುಸ್ತರವಾಗಿದೆ. ಇದಕ್ಕೋಸ್ಕರವಾಗಿ ಸರ್ಕಾರದವರು ಹೆಚ್ಚು ಹೆಚ್ಚಾಗಿ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಮತ್ತು ತುಂಬಾ ಮೆಹನತ್ತು ಮಾಡುತ್ತಿದ್ದಾರೆ. ಇದು ನಿಜವಾಗಿಯೂ ಅಭಿನಂದನೀಯವಾದ ವಿಚಾರ. ಇಷ್ಟು ವಿಷಯಗಳನ್ನು ಹೇಳಿ ಕೆಲವು ಸಲಹೆಗಳನ್ನು ಈ ಇಲಾಖೆಗೆ ನಾನು ಕೊಡಲು ಇಚ್ಛಿಸುತ್ತೇನೆ. ಕೆಲವು ವರ್ಷಗಳ ಹಿಂದೆ ನಾನು ಡೆನ್ಮಾರ್ಕ್ ದೇಶಕ್ಕೆ ಹೋಗಿದ್ದೆ. ಅಲ್ಲಿ ಒಂದು ಆಸ್ಪತ್ರೆಗೆ ಹೋಗಬೇಕಾದ ಪ್ರಸಂಗ ಬಂತು. ನನ್ನ ಜೊತೆಯಲ್ಲಿದ್ದ ಸ್ನೇಹಿತರು ಆಮಶಂಕೆಯಿಂದ ಆಸ್ಪತ್ರೆಗೆ ಸೇರಬೇಕಾಯಿತು. ಅವರು ಅಲ್ಲಿ ಅಡ್ಮಿಟ್ ಆದಮೇಲೆ ನಾನು ಅವರನ್ನು ನೋಡುವುದಕ್ಕೆ ಆಗಾಗ್ಗೆ ಹೋಗುತ್ತಿದ್ದೆ. ಅಲ್ಲಿನ ವೈದ್ಯರು ಅವರಲ್ಲಿದ್ದಂಥ ಒಂದು ದಯಾಪೂರಿತವಾದ ಹೃದಯದಿಂದ ಕಾಯಿಲೆಗಳನ್ನು ವಾಸಿ ಮಾಡುತ್ತಿದ್ದರೋ ಅಥವಾ ಔಷಧಿಗಳನ್ನು ಕೊಟ್ಟು ವಾಸಿ ಮಾಡುತ್ತಿದ್ದರೋ ನನಗೆ ಗೊತ್ತಾಗಲಿಲ್ಲ. ಅಲ್ಲಿನ ವೈದ್ಯರೆಲ್ಲರೂ ರೋಗಿಗಳ ವಿಚಾರದಲ್ಲಿ ಅಷ್ಟು ದಯಪೂರಿತವಾಗಿ ವರ್ತಿಸುತ್ತಿದ್ದಾರೆ. ಕಾಯಿಲೆಯವರನ್ನು ಕಂಡರೆ ತುಂಬಾ ಪ್ರೀತಿಯಿಂದ ನೋಡುತ್ತಿದ್ದರು. ಬಹುಶಃ ಅದರಿಂದಲೇ ಅವರ ಕಾಯಿಲೆಗಳು ವಾಸಿಯಾಗುತ್ತಿತ್ತೋ ಏನೋ ಎಂದು ನನಗನ್ನಿಸಿತು. ಬಹುಶಃ ಮಂತ್ರಿಗಳು ಈ ಮಾತನ್ನು ಒಪ್ಪಲಾರರು ಎಂಬುದಾಗಿ ನಾನು ಅಂದುಕೊಂಡಿದ್ದೇನೆ. ಎಲ್ಲಾ ಕಾಯಿಲೆಗಳಿಗೆ ನಿಜವಾಗಿ ಅವರ ಪ್ರೇಮ ಪೂರಿತವಾದ ಉಪಚಾರವೇ ಉತ್ತಮ ಔಷಧಿ ಯೆಂಬುದಾಗಿ ನಾನು ಅಂದುಕೊಂಡೆ. ಅಲ್ಲಿನ ವೈದ್ಯರುಗಳು ಹಸನ್ಮುಖರಾಗಿ, ಪ್ರೇಮ ಪೂರಿತವಾದ ಮಾತುಕತೆಗಳನ್ನು ರೋಗಿಗಳೊಡನೆ ಆಡುತ್ತಿದ್ದುದ್ದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಗುತ್ತಿತ್ತು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕವಿ ವರ್ಣನೆ ಮಾಡಿದಂತೆ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರಲ್ಲಾ !

ಶ್ರೀ ಟಿ. ಮಾದಯ್ಯ ಗೌಡ.—ಆಸ್ಪತ್ರೆಯಲ್ಲಿ ಕಾಯಿಲೆ ಇದ್ದಂಥ ನನ್ನ ಸ್ನೇಹಿತರು 8 ದಿವಸಗಳ ಮೇಲೆ ಸಂಪೂರ್ಣವಾಗಿ ಗುಣ ಹೊಂದಿ ಹೊರಗಡೆ ಬರುವಾಗ ಇನ್ನು ನಾಲ್ಕು ದಿವಸಗಳು ಆಸ್ಪತ್ರೆಯಲ್ಲಿ ಇದ್ದು ಬರಬೇಕು ಎಂದು ನನಗೆ ಹೇಳಿದರು. ಅಂದರೆ ಅಲ್ಲಿನ ಆಸ್ಪತ್ರೆಯಲ್ಲಿ ಎಷ್ಟರಮಟ್ಟಿಗೆ ರೋಗಿಗಳಿಗೆ ಉಪಚಾರ, ಒಳ್ಳೆಯ ಸಹವಾಸ, ಒಳ್ಳೆಯ ಔಷಧಿ ಕೊಡುತ್ತಿದ್ದರು ಎಂದು ನನಗೆ ಚೆನ್ನಾಗಿ ಅನುಭವವಾಯಿತು. ಆದರೆ ನಮ್ಮ ಆಸ್ಪತ್ರೆಯಲ್ಲಾದರೋ ನಮ್ಮ ಡಾಕ್ಟರುಗಳು ಕೇವಲ ವೈದ್ಯರಾಗಿರುವುದೇ ಅಲ್ಲದೆ ಅಲ್ಲಿನವರ ಹಾಗೆ ರೋಗಿಗಳ ಬಗ್ಗೆ ದಯಪೂರಿತರಾಗಿಯೂ ಇರಬೇಕೆಂದು ನಾನು ಆಶಿಸುತ್ತೇನೆ. ಆದ್ದರಿಂದ ನಮ್ಮ ಮೆಡಿಕಲ್ ಕಾಲೇಜುಗಳಲ್ಲಿ ಕೇವಲ ವೈದ್ಯಕೀಯ ವಿಚಾರಗಳನ್ನೇ ಹೇಳದೆ ಡಾಕ್ಟರುಗಳು ಸಂಪೂರ್ಣವಾಗಿ ಮಾನವೀಯತೆಯ ಮಾರ್ಗದಲ್ಲಿ ವರ್ತಿಸುವ ಮನೋಧರ್ಮವನ್ನು ಪಡೆಯುವಹಾಗೆ ಅವರಿಗೆ ತರಪೇತು ಮಾಡಬೇಕು. ಎಂಬುದಾಗಿ ನನಗಾದರೂ ಅನ್ನಿಸುತ್ತದೆ. ಇನ್ನು ಮತ್ತೊಂದು ವಿಚಾರವನ್ನು ನಾನು ಪಾಶ್ಚಿಮಾತ್ಯ ದೇಶದಲ್ಲಿ ನೋಡಿದ್ದನ್ನು ಈ ಸಭೆಯ ಮುಂದೆ ತಿಳಿಸಲು ಅಪೇಕ್ಷಿಸುತ್ತೇನೆ. ಅಲ್ಲಿ ಕೆಲವು ಸ್ಕೂಲುಗಳಿಗೆ ನಾನು ಹೋಗತಕ್ಕ ಪ್ರಸಂಗ ನನಗೆ ದೊರಕಿತು. ಸುಮಾರು 500-1000 ವಿದ್ಯಾರ್ಥಿಗಳಿರತಕ್ಕ

ಒಂದೊಂದು ಸ್ಕೂಲಿನಲ್ಲಿ ಒಂದೊಂದು ಆಸ್ಪತ್ರೆ ಇರುತ್ತಿತ್ತು. ಅಲ್ಲಿನ ಮಕ್ಕಳನ್ನು ಅಲ್ಲಿನ ಆಸ್ಪತ್ರೆ ಡಾಕ್ಟರು ಆಗಾಗ್ಗೆ ಪರೀಕ್ಷೆ ಮಾಡಿ ಅವರಿಗೆ ತಿಳುವಳಿಕೆಯನ್ನು ಕೊಡುತ್ತಿದ್ದರು. ಅವರ ಹಲ್ಲು, ಕಿವಿ, ಮೂಗು, ಗಂಟಲ ಇತ್ಯಾದಿಗಳನ್ನು ಪರೀಕ್ಷೆ ಮಾಡಿ ಅವುಗಳಲ್ಲಿ ಏನಾದರೂ ದೋಷವಿದ್ದರೆ ಅವನ್ನು ಜಾಗ್ರತೆಯಾಗಿ ನಿವಾರಣೆ ಮಾಡುತ್ತಿದ್ದರು. ಪ್ರತಿ ಮಗುವಿಗೂ ಒಂದು ರಿಜಿಸ್ಟರ್‌ನಲ್ಲಿ ಒಂದೊಂದು ಪುಟವನ್ನು ಬಿಟ್ಟು ಇಂತಹ ದಿವಸ ಪರೀಕ್ಷೆ ಮಾಡಿದೆ ಇಂತಹ ದಿವಸ ಹೀಗಿತ್ತು-ಈ ತರಹ ಎಲ್ಲಾ ಮಕ್ಕಳನ್ನು ಪರೀಕ್ಷೆ ಮಾಡಿ ತಿಳುವಳಿಕೆ ಕೊಡುತ್ತಿದ್ದರು. ಎರಡು-ಮೂರು ತಿಂಗಳಿಗೊಂದು ಸಾರಿ ಪರೀಕ್ಷೆ ಮಾಡುವುದನ್ನು ಮುಂದುವರಿಸಿಕೊಂಡು ಅವರು ಆ ದೇಶದ ಮಕ್ಕಳ ಯೋಗಕ್ಷೇಮಕ್ಕಾಗಿ ಆಗಾಗ್ಗೆ ವೈದ್ಯಕೀಯ ಪರೀಕ್ಷೆಗಾಗಿ ಅವರನ್ನು ಒಳಪಡಿಸಿ ಎಲ್ಲ ಜನಾಂಗದ ಒಂದು ಆರೋಗ್ಯಾಭಿವೃದ್ಧಿಗೆ ಎಷ್ಟರಮಟ್ಟಿಗೆ ವೈದ್ಯರು ನೆರವಾಗುತ್ತಿದ್ದುದನ್ನು ನಾನು ನೋಡಿದೆ. ನಮ್ಮ ದೇಶದಲ್ಲಿ ನಾವೂ ಕೂಡ ಮಕ್ಕಳ ವೈದ್ಯ ಪರೀಕ್ಷೆಗೋಸ್ಕರ ಫೀಸ್ ಕೊಡುತ್ತೇವೆ. ಆದರೆ ನಮ್ಮ ಮಕ್ಕಳಿಗೆ ಯಾವ ಡಾಕ್ಟರೂ ಕೂಡ ನಾಲ್ಕು ವರ್ಷಗಳಿಗೊಂದು ಸಾರಿಯಾದರೂ ಪರೀಕ್ಷೆ ಮಾಡಿದ್ದನ್ನು ನಾನು ನೋಡಲಿಲ್ಲ. ಇದು ಸರಿಯಾದುದಲ್ಲ. ನಾವು ಫೀಜು ಕಟ್ಟಿದ ಮೇಲೂ ಮಕ್ಕಳಿಗೆ ವೈದ್ಯ ಪರೀಕ್ಷೆ ನಡೆಸದೇ ಹೋದರೆ ಅದು ನ್ಯಾಯವಲ್ಲ, ಧರ್ಮವಲ್ಲ ಎನಿಸುತ್ತದೆ. ವೈದ್ಯಪರೀಕ್ಷೆಗಾಗಿ ಕೊಡತಕ್ಕ ಫೀಜು ವಿದ್ಯಾಭ್ಯಾಸದ ಇಲಾಖೆಯಲ್ಲಿ ಸಾವಿರಾರು ರೂಪಾಯಿ ವಸೂಲಾಗುತ್ತದೆ, ಇದನ್ನು ಯಾವರೀತಿ ಖರ್ಚುಮಾಡುತ್ತಾರೋ ಗೊತ್ತಿಲ್ಲ. ವೈದ್ಯ ಇಲಾಖೆಯವರು ಈ ವಿಷಯಕ್ಕೆ ಗಮನಕೊಡುವುದು ಅತ್ಯಗತ್ಯ. ಜನರ ಆರೋಗ್ಯಭಾಗ್ಯವನ್ನು ಕಾಪಾಡುವುದು ಬಹಳ ಮುಖ್ಯ. ನಮ್ಮ ಮಕ್ಕಳಿಗೆ ವಿದ್ಯೆ ಹೇಗೆ ಅವಶ್ಯಕವೋ ಹಾಗೆಯೇ ಅವರ ಆರೋಗ್ಯವೂ ಮುಖ್ಯ. ಚಿಕ್ಕವಯಸ್ಸಿನಲ್ಲಿ ಆರೋಗ್ಯವನ್ನು ಕಾಪಾಡಿಕೊಂಡರೆ, ಮುಂದಿನ ಪ್ರಜೆಗಳಾಗುವ ನಮ್ಮ ಮಕ್ಕಳು ಆರೋಗ್ಯವಂತರಾದ-ದೃಢಕಾಯರಾದ ಪ್ರಜೆಗಳಾಗಿ ಬೆಳೆಯಲು ಅವಶ್ಯಕವಾಗುತ್ತದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಯಾರಾದರೂ ಕಾಹಿಲೆಯವರು ಹೋದರೆ ಈ ವೈದ್ಯಪದ್ಧತಿ ಆ ವೈದ್ಯಪದ್ಧತಿ ಎಂದು ಹೇಳಿ ಔಷಧವನ್ನು ಕೊಡುವುದಿಲ್ಲ. ಅವರು ಕೊಡುವುದು ಕಾಹಿಲೆ ವಾಸಿಯಾಗತಕ್ಕ ಔಷಧ. ಯಾವ ಪದ್ಧತಿಯದಾದರೂ ಆಗಿರಬಹುದು; ಅಲೋಪತಿ, ಆಯುರ್ವೇದ, ಹೋಮಿಯೋಪತಿ, ಯಾವುದಾದರೂ ಆಗಿರಬಹುದು. ಕಾಹಿಲೆ ಗುಣವಾಗಲು ಯಾವುದಾದರೇನು ? ಭಗವಂತ ಸೃಷ್ಟಿಮಾಡಿರುವುದರಲ್ಲಿ ಯಾವುದನ್ನಾದರೂ ಕಾಹಿಲೆ ಗುಣವಾಗುವುದಕ್ಕೆ ಕೊಡಬೇಕು. ನಮ್ಮ ಪದ್ಧತಿಯೇ ಸರಿ ಎಂದು ಹೇಳುವುದು ಸೂಕ್ತವಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ ಈ ರೀತಿ ಹೇಳುವುದಿಲ್ಲವೆಂದು ತಿಳಿದುಕೊಂಡಿದ್ದೇನೆ. ಕಾಹಿಲೆ ಗುಣವಾಗಲು ತಕ್ಕ ಔಷಧ ಯಾವಪದ್ಧತಿಯದಾದರೇನೋ ನನಗೆ ಅರ್ಥವಾಗುವುದಿಲ್ಲ. ಹೀಗಿರುವಾಗ ನಾವು ಕಾಲೇಜಿನಲ್ಲಿ ಇದು ಅಲೋಪತಿ, ಆಯುರ್ವೇದ, ಹೋಮಿಯೋಪತಿ ಕಾಲೇಜು ಎಂದೇಕೆ ಬೇರೆ ಬೇರೆ ವಿಭಾಗ ವಿದೆಯೋ ನನಗೆ ಅರ್ಥವಾಗುವುದಿಲ್ಲ. ಅಥವಾ ಈ ವಿಚಾರದಲ್ಲಿ ನಾನೇ ತಪ್ಪುಭಾವನೆಯನ್ನಿಟ್ಟುಕೊಂಡಿದ್ದೇನೋ ಗೊತ್ತಿಲ್ಲ; ಇದನ್ನು ಮಂತ್ರಿಗಳು ಹೇಳಬೇಕು. ಎಲ್ಲಾ ಪದ್ಧತಿಗಳಲ್ಲಿಯೂ ಅತ್ಯುತ್ತಮವಾದುದೇನಿದೆಯೋ ಅದನ್ನು ತೆಗೆದುಕೊಂಡು ಅಭ್ಯಾಸಮಾಡಿ ಏಕೆ ಉಪಯೋಗಮಾಡಿಕೊಳ್ಳಬಾರದು, ಏಕೆ ಜನರ ರೋಗಗಳನ್ನು ಗುಣಪಡಿಸಬಾರದು ಎನ್ನಿಸುತ್ತದೆ. ಆಯುರ್ವೇದಕ್ಕೆ ತಕ್ಕ ಪ್ರೋತ್ಸಾಹವಿಲ್ಲ, ಇದು ನಮ್ಮ ದೇಶದ ವೈದ್ಯ, ಇದನ್ನು ಏನಾದರೂ ಅಭಿವೃದ್ಧಿ ಮಾಡಬೇಕೆಂದು ಕೆಲವರು ಸ್ನೇಹಿತರು ಹೇಳಿದರು. ನಿಜವಾಗಿ ಆಯುರ್ವೇದದಲ್ಲಿ ಏನು ಒಳ್ಳೆಯ ಪ್ರಯೋಗವಿದೆಯೋ ಅದನ್ನು ಆದಷ್ಟು ಬೇಗ ನಾವು ಹೊಂದಿಸಿಕೊಳ್ಳಬೇಕಾಗುತ್ತದೆ, ಆಯುರ್ವೇದದ ಜೊತೆಗೆ ಬೇರೆ ವೈದ್ಯವನ್ನು ಸೇರಿಸಬಾರದೆಂದು ಕಟುಕತರವಾದ ಭಿನ್ನಾಭಿಪ್ರಾಯವಿರುವುದು ಸೂಕ್ತವಲ್ಲ. ಆಯುರ್ವೇದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಇತ್ತೀಚೆಗೆ ನಮ್ಮ ಸರಕಾರದವರೂ Council of Indian Medicines ಅವರೂ ಮಾಡಿದ್ದಾರೆ. ಅಲ್ಲಿ ಅವರು ಆಯುರ್ವೇದ, ಯುನಾನಿ, ಹೋಮಿಯೋಪತಿ ಪದ್ಧತಿಗಳಿಗೆ ಗಮನಕೊಟ್ಟು ಯೋಚನೆ ಮಾಡುತ್ತಿದ್ದಾರೆ. ಆದರೆ ಇದು ಸಾಲದು. ಆಯುರ್ವೇದ, ಯುನಾನಿ ಇತ್ಯಾದಿ ಪದ್ಧತಿಗಳಲ್ಲಿ ಸಂಶೋಧನೆ ಏನು ನಡೆಯಬೇಕೋ, ಈ ಕಾಲಕ್ಕೆ ತಕ್ಕ ಹಾಗೆ ಔಷಧಗಳನ್ನು ತಯಾರುಮಾಡುವುದು, ಪ್ರಯೋಗ ಮಾಡುವುದು ಮುಂತಾದುವು ಸೂಕ್ತ ರೀತಿಯಲ್ಲಿ ನಡೆಯುತ್ತಿಲ್ಲ. ಇನ್ನೂ ಅಭಿವೃದ್ಧಿಸ್ಥಿತಿಗೆ ಬರಬೇಕು. ನಮ್ಮ ದುರದೃಷ್ಟದಿಂದ ಅಲೋಪತಿ ಮೇಲುಗೈ ಆಗಿದೆ. ಆಯುರ್ವೇದ, ಯುನಾನಿ ಪದ್ಧತಿಗಳಿದ್ದರೂ ಅಲೋಪತಿಕ್ ಡಾಕ್ಟರುಗಳು ಬಾಕಿ ಪದ್ಧತಿಗಳ ಮೇಲೆ prejudice ಇಟ್ಟುಕೊಂಡಿದ್ದಾರೋ ಎಂಬ ಸಂಶಯ ಅನೇಕ ಸಲ ಬರುತ್ತದೆ. ಹಾಗಿದ್ದರೆ, ಇದು ಸರಿಯಿಲ್ಲ. ಅಲೋಪತಿಯಿಂದ ನಮ್ಮ ದೇಶದ ಹಣ ಹೊರದೇಶಗಳಿಗೆ ಹೋಗುತ್ತದೆ. ಇದನ್ನು ತಡೆಯಲು ನಮ್ಮ ಪದ್ಧತಿಗಳನ್ನು ಅಭಿವೃದ್ಧಿ ಪಡಿಸಿಕೊಂಡು ನಮ್ಮ ದೇಶದ ಔಷಧಗಳಿಗೆ ಹೆಚ್ಚು ಮಾನ್ಯತೆ ಬರುವಹಾಗೆ ಮಾಡುವುದು ಯೋಗ್ಯವೆಂದು ನಾನಾದರೂ ಅಭಿಪ್ರಾಯ ಪಡುತ್ತೇನೆ. ಆದುದರಿಂದ ನಮ್ಮಲ್ಲಿ

(ಶ್ರೀ ಟಿ. ಮಾದಯ್ಯಗೌಡ)

ಸಂಶೋಧನೆಗೆ ಹೆಚ್ಚು ಅವಕಾಶವಿರಬೇಕು. ನಮ್ಮಲ್ಲಿರುವ ಒಳ್ಳೆಯ ಮೂಲಿಕೆಗಳು ಪರದೇಶಗಳಲ್ಲಿಲ್ಲ. ಅವರು ನಮ್ಮಿಂದ ಅನೇಕ ಒಳ್ಳೆಯ ಮೂಲಿಕೆಗಳನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಅವುಗಳಿಂದ ಔಷಧಗಳನ್ನು ತಯಾರುಮಾಡಿ ಹೆಚ್ಚಿನ ಬೆಲೆಗೆ ನಮ್ಮ ಮೇಲೆ ತಂದು ಹೊರಿಸುತ್ತಿದ್ದಾರೆ. ಉದಾಹರಣೆಗೆ, ಸರ್ಪಗಂಧಿ ನಮ್ಮ ದೇಶದ ಮೂಲಿಕೆ. ಇದನ್ನು ಇಲ್ಲಿಂದ ತೆಗೆದುಕೊಂಡು ಹೋಗಿ ಅಲ್ಲಿ ಔಷಧಮಾಡಿ ಹೃದಯದ ರೋಗಕ್ಕೆ ಉಪಯೋಗಿಸುತ್ತಿದ್ದಾರೆ. ಹೀಗೆ ಅನೇಕ ಮೂಲಿಕೆಗಳು ನಮ್ಮಲ್ಲಿರುವುದು ಪರದೇಶಗಳಲ್ಲಿಲ್ಲ. ನಮ್ಮ ಔಷಧಗಳನ್ನು ಉಪಯೋಗ ಮಾಡಬೇಕಾದರೆ ಮೂಲಿಕೆಗಳನ್ನು ಬೆಳೆಸುವುದಕ್ಕೆ ಹೆಚ್ಚಿನ ಗಮನ ಕೊಡಬೇಕು. ಸಂಶೋಧನ ಮಾಡುವುದಕ್ಕೂ ಪ್ರಯೋಗ ಮಾಡುವುದಕ್ಕೂ ಹೆಚ್ಚು ಶ್ರದ್ಧೆವಹಿಸಬೇಕೆಂದು ಹೇಳುತ್ತೇನೆ.

ನಮ್ಮ ದೇಶದಲ್ಲಿ ವೈದ್ಯ ಸಹಾಯ ಗ್ರಾಮಾಂತರಗಳಲ್ಲಿ ಇನ್ನೂ ಸ್ವಲ್ಪ ಹೆಚ್ಚು ನಡೆಯಬೇಕು. ಇದು ಅತ್ಯಂತ ತುರ್ತಿನ ಕೆಲಸವೆಂದು ಹೇಳುತ್ತೇನೆ. ಗ್ರಾಮವಾಸಿಗಳು ಪ್ರಕೃತಿ ಜನ್ಯವಾದ ವಾತಾವರಣದಲ್ಲಿ ಬೆಳೆಯುತ್ತಿದ್ದರೂ ಅನೇಕ ರೋಗಗಳಿಗೆ ತುತ್ತಾಗುತ್ತಾರೆ. ಅವರಿಗೆ ಈ ಚಿಕಿತ್ಸೆಗೆ ಸರಿಯಾದ ವ್ಯವಸ್ಥೆಯಿಲ್ಲ. ಯಾವುದಾದರೂ ಪ್ರದೇಶದ ಜನರಿಂದ ಧನ ಸಹಾಯ ಬರಲಿಲ್ಲವೆಂದು ಆ ಪ್ರದೇಶವನ್ನು ಉಪೇಕ್ಷೆಮಾಡುವ ಸಂಭವವಿದೆ. ಉದಾಹಣೆಗೆ, ನನ್ನ ಕ್ಷೇತ್ರದಲ್ಲಿ ಕೊಟಗಲ್ಲು ಹೋಬಳಿಯಿದೆ. ಅದು ದೊಡ್ಡ ಹೋಬಳಿ. ಅಲ್ಲಿ ಆಸ ತ್ರೆಯಿಲ್ಲ. ಹಿಂದೆ ಒಬ್ಬ ಸೂಲಗಿತ್ತಿ ಮಾತ್ರ ಇದ್ದುದ್ದು ಈಗ ಅವರೂ ಕೂಡ ಇಲ್ಲ. ಇದು ಶೋಚನೀಯವಾದ ಸ್ಥಿತಿ. ಇದ್ದವರನ್ನು ಯಾವುದೋ ಹಳ್ಳಿಗೆ ವರ್ಗಮಾಡಿದಮೇಲೆ ಪುನಃ ಅಲ್ಲಿಗೆ ಬೇರೆಯಾರೂ ಬರಲಿಲ್ಲ. ಇಂಥಾದ್ದನ್ನು ನೋಡಿ ಸರಿಯಾದ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಲಪೇಕ್ಷಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರ್ಕಾರದವರು Birth control ಮಾಡಬೇಕೆಂದು ಹೇಳುತ್ತಿದ್ದರೆ ನೀವು ಸೂಲಗಿತ್ತಿ ಇಲ್ಲವೆಂದು ಹೇಳುತ್ತೀರಲ್ಲ!

ಶ್ರೀ ಟಿ. ಮಾದಯ್ಯಗೌಡ.—ಅದಕ್ಕೆ ಆಮೇಲೆ ಉತ್ತರ ಹೇಳುತ್ತೇನೆ

ಹೋಮಿಯೋಪತಿ ವೈದ್ಯ ಪದ್ಧತಿಯನ್ನು ಬಹಳ ಸುಲಭವಾಗಿ ಕಲಿಯಬಹುದೆಂದು ಬಹಳ ಜನ ತಜ್ಞರು ಅಭಿಪ್ರಾಯ ಪಡುತ್ತಾರೆ. ಈ ಪದ್ಧತಿಯನ್ನು ನಮ್ಮ ನೆರೆ ಪ್ರಾಂತಗಳಾದ ಆಂಧ್ರ ಮತ್ತು ಮದರಾಸು ಪ್ರಾಂತಗಳಲ್ಲಿ ಬಹಳ ಉಪಯೋಗಿಸಿ, ಅಲ್ಲಿ ಹೋಮಿಯೊಪತಿ ವೈದ್ಯರನ್ನು ಸರ್ಕಾರದವರು ನೇಮಕಮಾಡಿಕೊಂಡಿದ್ದಾರೆ. ಹಾಗೆಯೇ ಇಲ್ಲಿಯೂ ಮಾಡಲು ಹೋಮಿಯೋಪತಿಕ್ ಕಾಲೇಜನ್ನು ಸ್ಥಾಪನೆಮಾಡಿ ಉತ್ತೇಜನ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಹೋಮಿಯೊಪತಿ, ಆಯುರ್ವೇದ ಮತ್ತು ಯುನಾನಿ ವೈದ್ಯ ಪದ್ಧತಿಗಳ ರಿಜಿಸ್ಟ್ರೇಷನ್ ಸಂಬಂಧವಾದ ಮಸೂದಾ ಕಾನೂನನ್ನು ಸುಮಾರು ಎರಡು ವರ್ಷದ ಹಿಂದೆಯೇ ಪಾಸ್ ಮಾಡಿದ್ದೆವು, ಅದನ್ನು ಜಾರಿಗೆ ಕೊಡಲಿಲ್ಲವೆಂದು ಮಿತ್ರರು ಹೇಳುತ್ತಿದ್ದಾರೆ ಅದನ್ನು ಜಾರಿಗೆ ಕೊಡುವುದರಿಂದ ಈಗ ನಮ್ಮ ದೇಶದಲ್ಲಿರುವ ಪಂಡಿತರು ಮತ್ತು ಡಾಕ್ಟರುಗಳನ್ನು ರಿಜಿಸ್ಟರ್ ಮಾಡಿಕೊಂಡು ಅವರು ಯಾರು, ಎಲ್ಲೆಲ್ಲಿದ್ದಾರೆಂದು ಗೊತ್ತುಮಾಡಿಕೊಳ್ಳುವುದಕ್ಕನುಕೂಲವಾಗುತ್ತದೆ. ರಿಜಿಸ್ಟರಾದ ಡಾಕ್ಟರುಗಳಿರುವುದರಿಂದ ಜನರಿಗೂ ಅನುಕೂಲವಾಗುತ್ತದೆ. ಆದುದರಿಂದ, ಆ ಕಾನೂನನ್ನು ಆದಷ್ಟು ಜಾಗ್ರತೆ ಜಾರಿಗೆ ಕೊಡುವುದುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕೆಂದು ಸೂಚಿಸುತ್ತೇನೆ.

Family Planning ವಿಚಾರವನ್ನು ಮಿತ್ರರು ಹೇಳಿದರು. ನನಗೆ ಮೊದಲು ಈ ವಿಷಯದಲ್ಲಿ ಒಂದು ರೀತಿಯ ಅಭಿಪ್ರಾಯವಿತ್ತು. ಮೇಧಾವಿಗಳೂ, ತಿಳಿವಳಿಕಸ್ಥರೂ ಈ ಮಿತ ಸಂತಾನ ಮಾಡುವುದು ಬೇಡ, ದೇವರು ಹೇಗಿದ್ದರೂ ನಮಗೆ ಕೈಕಾಲುಗಳನ್ನು ಕೊಟ್ಟಿದ್ದಾನೆ, ಹುಟ್ಟಿಸಿದ ದೇವರು ಹುಲ್ಲುಮೇಯಿಸುತ್ತಾನೆಯೋ ಎಂದು ಹೇಳುತ್ತಿದ್ದರೂ, ನನಗೂ ಆರೀತಿ ಅನಿಸಿತ್ತು. ಆದರೆ ಈಗಿನ ಪರಿಸ್ಥಿತಿಯನ್ನು ನೋಡಿದರೆ, ಸಂತತಿ ನಿರೋಧ ಮಾಡಬೇಕಾಗುತ್ತದೆ. ಇತರ ದೇಶಗಳಿಗಿಂತ ನಮ್ಮ ದೇಶದಲ್ಲಿ ಇದು ಹೆಚ್ಚು ಅಗತ್ಯವಾಗಿದೆ. ಪ್ರಜಾಸಂಖ್ಯೆ ಬೆಳೆದಂತೆ ಹೆಚ್ಚು ಆಹಾರ ಬೇಕಾಗುತ್ತದೆ. ಮಕ್ಕಳಿಗೆ ಬೇಕಾದ ವಿದ್ಯೆ, ವಿವೇಕ ತಕ್ಕಷ್ಟಿಲ್ಲವಾಗುತ್ತದೆ...

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಈ ದೇಶದಲ್ಲಿ ಪುತ್ರಕಾಮೇಷ್ಟಿ ಯಾಗಮಾಡಿ ಮಕ್ಕಳನ್ನು ಪಡೆಯುತ್ತಿದ್ದರು ; ನೀವು ಹೀಗೆ ಹೇಳಬಹುದೆ ?

ಶ್ರೀ ಟಿ. ಮಾದಯ್ಯಗೌಡ.—ಪುತ್ರಕಾಮೇಷ್ಟಿ ಯಾಗಮಾಡುತ್ತಿದ್ದ ಕಾಲದಲ್ಲಿ ಹೋಟೆಲುಗಳು, ಸಿನೆಮಾಗಳು, ಡಾಲ್ಡಾ ಮುಂತಾದವು ಇರಲಿಲ್ಲ. ಇವುಗಳಿರುವುದರಿಂದ ಈಗ ಮಕ್ಕಳು ಜಾಸ್ತಿಗುತ್ತಿವೆ. ಈಗಿನ ನವನಾಗರಿಕತೆಯ ಕಾಲದಲ್ಲಿ ಜಾಗ್ರತೆ ಹೆಚ್ಚು ಹೆಚ್ಚು ಮಕ್ಕಳಾಗಲು ಅಷ

ಕಾಶವಿದೆ. ಪುತ್ರಕಾಮೇಷ್ಟಿಯ ಕಾಲ ಬೇರೆ, ಈಗ ಬೇರೆಕಾಲ. ಈಗ ಬೆಳೆಯುತ್ತಿರುವ ಪ್ರಜಾ ಸಂಖ್ಯೆಯಿಂದ ಆಗುವ ಅನಿಷ್ಟವನ್ನು ಹೋಗಲಾಡಿಸಲು ಏನಾದರೂ ಮಾಡಬೇಕು.

ಶ್ರೀ ಸಂಜೀವನಾಥ ಐಕಳ.—ಸಂತತಿ ಸಂಯಮ ಮಾಡಬೇಕು, ವಿರೋಧವಲ್ಲ.

Mr. CHAIRMAN.—The Hon'ble members time is over.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣೆ ಸಂಬಂಧದಲ್ಲಿ ಮಾನ್ಯ ಆರೋಗ್ಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಈ ಎರಡು ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದು ಆಶೆಪಡುತ್ತೇನೆ.

2.30 P.M.

ಸುಮಾರು 6½—7 ಕೋಟಿ ರೂಪಾಯಿಗಳನ್ನು ನಾವು ಈ ಎರಡು ಬಾಬುಗಳಿಗಾಗಿ ಖರ್ಚು ಮಾಡುತ್ತಿದ್ದೇವೆ. ಆದಾಗ್ಯೂ ನಮ್ಮ ಆವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗಿಲ್ಲ, ಮುಖ್ಯವಾಗಿ ಹಳ್ಳಿಗಳಲ್ಲಿ ವೈದ್ಯಕೀಯ ಉಪಚಾರ ಬಹಳ ಕಡಮೆಯಾಗಿ ದೊರೆಯುತ್ತಿದೆ, ಅನೇಕ ವೇಳೆ ಅದೂ ಕೂಡ ದೊರೆಯುವುದಿಲ್ಲ. ನಮ್ಮ ಮಂಗಳೂರು ಜಿಲ್ಲೆಯಿಂದ ಬಂದಿರುವ ಮಾನ್ಯ ಸದಸ್ಯರು ಅಧ್ಯಕ್ಷತೆ ವಹಿಸಿದ್ದಾರೆ. ಅವರು ತಮ್ಮ ವೃತ್ತಿಯಲ್ಲಿ ಬಹಳ ಹೆಸರು ಗಳಿಸಿರುವ ಹಾಗೆ ಡಾ॥ ನಾಗಪ್ಪ ಆಳ್ವರವರೂ ಸಹ ಮಂಗಳೂರಿನಲ್ಲಿ ಬಹಳ ದೊಡ್ಡ ವೈದ್ಯರು. ಈಗಿನ ಆರೋಗ್ಯ ಮಂತ್ರಿಗಳಾದ ನಾಗಪ್ಪ ಆಳ್ವರವರು ಅಧಿಕಾರಕ್ಕೆ ಬಂದ ತಕ್ಷಣ ಅವರ ಹಿಂದಿನ ಆರೋಗ್ಯ ಸಚಿವರು ತೆರೆದಿದ್ದ ಎರಡು ಮೆಡಿಕಲ್ ಸ್ಕೂಲುಗಳನ್ನೂ ಮುಚ್ಚಿದರು. ಕಾರಣ ಮೆಡಿಕಲ್ ಸ್ಕೂಲು ಇರಬಾರದೆಂದು ಮೆಡಿಕಲ್ ಕೌನ್ಸಿಲ್ ಅಭಿಪ್ರಾಯಪಟ್ಟಿತು, ಮತ್ತು ಮೆಡಿಕಲ್ ಸ್ಕೂಲಿನಿಂದ ಹೊರಬಂದವರ ಜ್ಞಾನಪೂರ್ಣವಾಗಿರುವುದಿಲ್ಲ ಅಥವಾ ಅವರು ಪೂರ್ಣ ಡಾಕ್ಟರಾಗಿರುವುದಿಲ್ಲ, ಅದಕ್ಕೆ M.B.B.S. ಆಗಬೇಕು, ಸರ್ಜರಿಯಲ್ಲಿ ಒಳ್ಳೆಯ ಅನುಭವವಿರಬೇಕು ಎಂಬ ಕಾರಣದಿಂದ ಮೆಡಿಕಲ್ ಸ್ಕೂಲನ್ನು ತೈಬಿಡಬೇಕೆಂದು ಆ ಕೌನ್ಸಿಲ್ ಸೂಚಿಸಿತು. ಆದರೆ ಮಾನ್ಯ ಮಂತ್ರಿಗಳ ಗಮನವನ್ನು ಒಂದು ವಿಷಯದ ಕಡೆ ಸೆಳೆಯುತ್ತೇನೆ. ಈಗ ಬಹಳ ಜನ L.M.P. ಆದ ಡಾಕ್ಟರುಗಳಿದ್ದಾರೆ, ಅವರಲ್ಲಿ ಕೆಲವರು ಹೊರಗಡೆ ಪ್ರಾಕ್ಟೀಸ್ ಮಾಡುತ್ತಿದ್ದಾರೆ. ಅವರಲ್ಲಿ ಕೆಲವರಿಗೆ M.B.B.S.ಗೆ ಹೋಗಲು ಅವಕಾಶ ಕೊಡುತ್ತಿದ್ದಾರೆ. ಸರ್ಕಾರದವರು ಒಂದು ವಯಸ್ಸಿನ ಮಿತಿಹಾಕಿ ಈಗಿರುವ ಎಲ್ಲಾ L.M.P. ಡಾಕ್ಟರುಗಳು M.B.B.S.ಗೆ ಹೋಗಲು ಅವಕಾಶಕೊಟ್ಟು ಅವರಿಗೆ ಒಂದೇ ರೀತಿಯ ಸ್ಕೇಲ್, ಸಂಬಳ ಇವುಗಳ ವ್ಯವಸ್ಥೆ ಮಾಡುವುದು ಒಳ್ಳೆಯದೆಂದು ಕಾಣುತ್ತದೆ. ಇದೇ ಸಂದರ್ಭದಲ್ಲಿ ಇನ್ನೂ ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದು ಏನೆಂದರೆ ಹಳೆಯ ಮೈಸೂರಿನಲ್ಲಿ ಹೆಚ್ಚು ಪ್ರಮಾಣದಲ್ಲಿ ಹೆಲ್ತ್ ಯೂನಿಟ್, ಲೋಕಲ್ ಫಂಡ್ ಡಿಸ್ಪೆನ್ಸರಿ ಮುಂತಾದುದುವನ್ನು ತೆರೆಯಲಾಗಿದೆ. ಆದರೆ ಇವತ್ತು M.B.B.S. ಆಗಿರುವ ಒಬ್ಬ ಡಾಕ್ಟರು ತೀರ್ಥಹಳ್ಳಿ ತಾಲ್ಲೂಕು ಅರಳುಮಲ್ಲಿಗೆ ಗ್ರಾಮಕ್ಕೆ ಹೋಗಬೇಕೆಂದರೆ ಅಲ್ಲಿ ಸಂಸಾರ ಹೂಡತಕ್ಕವರಿಗೆ ವಿದ್ಯಾಭ್ಯಾಸಕ್ಕೆ ಮಕ್ಕಳನ್ನು ಕಳುಹಿಸಲು ಅಲ್ಲಿ ಹೈಸ್ಕೂಲಿನ ಸೌಕರ್ಯವಿಲ್ಲ. ಏಕೆಂದರೆ ಹೈಸ್ಕೂಲಿಗೆ ಆರು ಮೈಲಿ ದೂರ ಹೋಗಬೇಕು, ಕಾಲೇಜಿಗೆ ಶಿವಮೊಗ್ಗಾಕ್ಕೆ ಹೋಗಬೇಕು, ಹೆಚ್ಚಿನ ವಿದ್ಯಾಭ್ಯಾಸಕ್ಕೆ ಬೆಂಗಳೂರಿಗೆ ಮಕ್ಕಳನ್ನು ಕಳುಹಿಸಬೇಕು. ಅದಕ್ಕಾಗಿ ಆತ ಮಕ್ಕಳಿಗಾಗಿ ಒಂದು ಮನೆ, ತನಗಾಗಿ ಒಂದು ಮನೆ ಹೀಗೆ ಬೇರೆ ಬೇರೆ ಏರ್ಪಾಡು ಮಾಡಲು ಸಾಧ್ಯವಾಗುವುದಿಲ್ಲ. ತಾಲ್ಲೂಕ್ ಹೆಡ್‌ಕ್ವಾರ್ಟರುಗಳಿಗೆ ಹೋಗುವುದಕ್ಕೂ ಕೂಡ M.B.B.S. ಆಗಿರುವವರು ಹಿಂದು ಮುಂದೆ ನೋಡುತ್ತಾರೆ. ಅಂಥ ಸಂದರ್ಭದಲ್ಲಿ ಸಣ್ಣ ಸಣ್ಣ ಆಸ್ಪತ್ರೆಗಳಲ್ಲಿ ಯಾವ ಡಾಕ್ಟರುಗಳಿಗೆ ವಹಿಸಬೇಕೆಂದು ಸರ್ಕಾರ ಇಷ್ಟಪಡುವುದು ಅಥವಾ ಏರ್ಪಾಡು ಮಾಡುವುದಿದೆ ಎಂಬುದು ಸ್ಪಷ್ಟವಾಗಬೇಕು. ನಮ್ಮಲ್ಲಿ ಕೆಲವು ಆಸ್ಪತ್ರೆಗಳಲ್ಲಿ ಎರಡು ವರ್ಷಗಳಾದರೂ ಡಾಕ್ಟರೇ ಇಲ್ಲದೆ ಹಾಗೆಯೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಸರ್ಕಾರ ಯಾವ ರೀತಿಯ ಯೋಜನೆ ಮಾಡಿವೆ ಎನ್ನುವುದನ್ನು ನಮ್ಮ ಮಾನ್ಯ ಮಂತ್ರಿಗಳು ಸ್ವಲ್ಪ ತಿಳಿಸಬೇಕು. ಈ ವಿಷಯದಲ್ಲಿ ಒಂದು ಸಲಹೆ ಮಾಡುವುದೇನೆಂದರೆ ತಾಲ್ಲೂಕು ಕೇಂದ್ರಗಳಲ್ಲಿ ಒಂದು ಸಂಪೂರ್ಣ ಸುಸಜ್ಜಿತವಾದ ಆಸ್ಪತ್ರೆಯಿರಬೇಕು, ಅದಕ್ಕೆ ಒಂದು ಮೊಬೈಲ್ ವ್ಯಾನ್ ಇರಬೇಕು. ಅಲ್ಲಿನವರು ಆ ತಾಲ್ಲೂಕಿನಲ್ಲಿರುವ ಎಲ್ಲಾ ಹೆಲ್ತ್ ಯೂನಿಟ್ಟುಗಳು ಮತ್ತು ಆಸ್ಪತ್ರೆಗಳಿಗೆ ಹೋಗಿ ವಾರಕ್ಕೆ ಎರಡು ದಿವಸಗಳಾದರೂ ಸಹಾಯ ಮಾಡಬೇಕು. ಸೀರಿಯಸ್ ಆಗಿರುವ ಕೇಸುಗಳಿದ್ದರೆ ತಕ್ಷಣ ನೋಡಿ ಚಿಕಿತ್ಸೆ ನಡೆಸಬೇಕು. ಇಂಥ ಕ್ರಮ ಅನುಸರಿಸುವುದರಿಂದ ಮಾತ್ರ ಹಳ್ಳಿಗಳಿಗೆ ನೀವು ಯೋಗ್ಯ ಸೌಲಭ್ಯ ಒದಗಿಸಲು ಸಾಧ್ಯವೇ ಹೊರತು ಎಲ್ಲಾ ಗ್ರಾಮಗಳಲ್ಲೂ ಆಸ್ಪತ್ರೆ ತೆರೆದು

(ಶ್ರೀ ಎಸ್. ಗೋಪಾಲಗೌಡ)

ಅಲ್ಲಿಗೆ ಒಳ್ಳೆಯ ಡಾಕ್ಟರು, ಔಷಧಿ, ನರ್ಸು ಇತ್ಯಾದಿ ಸೌಲಭ್ಯಗಳನ್ನೆಲ್ಲಾ ಒದಗಿಸುವದಕ್ಕೆ ಹಣ ಕಾಸಿನ ದೃಷ್ಟಿಯಿಂದ ಕಷ್ಟವಾಗಬಹುದು. ಮತ್ತು ತರಬೇಕಾದ ಡಾಕ್ಟರು, ನರ್ಸುಗಳಿಲ್ಲವಿರುವುದರಿಂದ ಇಂದು ನಾನು ಹೇಳಿದ ಏರ್ಪಾಡನ್ನು ಜಾರಿಗೆ ತರುವುದನ್ನು ಸರ್ಕಾರ ಬಹಳ ತೀವ್ರವಾಗಿ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಆಸ್ಪತ್ರೆಗಳ ವಿಷಯದಲ್ಲಿ ಈಗ ಹೇಗೆ ನಡೆಯುತ್ತಿದೆಯೆಂದು ಆಗಲೆ ಹೇಳಿದ್ದೇನೆ. ಆಸ್ಪತ್ರೆಯಿದ್ದರೆ ಡಾಕ್ಟರಿಲ್ಲ, ಡಾಕ್ಟರಿದ್ದರೆ ಔಷಧಿಯಿಲ್ಲ, ನರ್ಸ್ ಇಲ್ಲ, ಇತ್ಯಾದಿ ಸೌಲಭ್ಯಗಳಿಲ್ಲದೆ ತೊಂದರೆಯಾಗುತ್ತಿದೆಯೆಂಬುದು ಸಾಮಾನ್ಯವಾದ ಟೀಕೆಯಾಗಿದೆ. ಇದರಲ್ಲಿ ಬಹಳ ನಿಜ ಕೂಡ ಇದೆ. ಆಸ್ಪತ್ರೆಗಳಿಗೆ ಒದಗಿಸುತ್ತಿರುವ ಆಹಾರ, ಹಾಲು, ಮೊಟ್ಟೆ, ಹಣ್ಣು ಮುಂತಾದವುಗಳ ಕಡೆ ಸರ್ಕಾರ ಹೆಚ್ಚು ನಿಗ ವಹಿಸಬೇಕು. ಇದಕ್ಕೆ ಕೊಡುವ ಹಣ ಅನೇಕ ಸಲ ಪೂರ್ಣವಾಗಿ ಖರ್ಚಾಗುವುದಿಲ್ಲ, ಇದರಲ್ಲಿ ಬಹಳ ನಷ್ಟವಾಗುತ್ತಿದೆ ಮತ್ತು ಎಲ್ಲಾ ರೀತಿಯಲ್ಲೂ ಅದು ದುರುಪಯೋಗವಾಗುತ್ತಿದೆ ಎಂದು ಹೇಳಿದ್ದೇವೆ. ಔಷಧಿ ಕೊಡುವುದು ಕೂಡ ಹಳೇಕಾಲದ ರೀತಿಯಲ್ಲೇ ನಡೆದುಕೊಂಡು ಹೋಗುತ್ತಿದೆ. ಅನೇಕ ಆಸ್ಪತ್ರೆಗಳಲ್ಲಿ ಔಷಧಿಯೇ ಇರುವುದಿಲ್ಲ. ತೀರ್ಥಹಳ್ಳಿಯ ಕಡೆ ಯಾರಾದರೂ ಕಾಯಿಲೆ ಬಿದ್ದರೆ ಔಷಧಿ ತೆಗೆದುಕೊಂಡು ಹೋಗಿ ಕೊಟ್ಟರೆ 'ಆಸ್ಪತ್ರೆಯಿಂದ ತಂದೆಯಾ' ಎಂದು ರೋಗಿ ಕೇಳುವುದುಂಟು. 'ಹೌದು' ಎಂದರೆ ಅದರಿಂದ ಕಾಯಿಲೆ ಬೇಗ ಗುಣವಾಗುವುದಿಲ್ಲ ಎಂದು ಹೇಳುತ್ತಾರೆ. ಅದಕ್ಕೆ 'ಆಸ್ಪತ್ರೆ ನೀರು' ಎಂದು ಸಾಮಾನ್ಯವಾಗಿ ಹೇಳುವುದುಂಟು. ಪ್ರೈವೇಟ್ ಪ್ರಾಕ್ಟೀಷನರುಗಳಿಂದ ಔಷಧಿ ತಂದು ಕುಡಿದರೆ ಎರಡೇ ದಿವಸಗಳಲ್ಲಿ ಗುಣವಾಗುವುದೆಂಬ ಅಭಿಪ್ರಾಯವಿದೆ. ಮಂಗಳೂರಿನಲ್ಲೂ ಹೀಗೆಯೇ ಇರಬಹುದು. ಮಂತ್ರಿಗಳಿಗೆ ಇದು ಗೊತ್ತಿರಬಹುದು. ಮಂಗಳೂರಿನವರು ಡಾಕ್ಟರ್ ನಾಗಪ್ಪ ಆಳ್ವರವರನ್ನೇ ಹುಡುಕಿಕೊಂಡು ಹೋಗುತ್ತಿದ್ದರೆಂದು ಹೇಳುತ್ತಾರೆ. ಕಾರಣ ಗೊತ್ತಿದೆ. ಒಂದು ತಾಲ್ಲೂಕಿನಲ್ಲಿ, ಜಿಲ್ಲೆಯಲ್ಲಿ ಹತ್ತಾರು ಜನ ಪ್ರಗತಿಪರರಾದ ಡಾಕ್ಟರುಗಳಿರಬಹುದು. ಜನರು ಅವರಲ್ಲೇ ಹೋಗುವುದುಂಟು. ಅವರಿಗೆ ಹೆಚ್ಚು ಹಣ ದೊರೆಯುತ್ತದೆ. ಶಿವಮೊಗ್ಗ ಅಥವಾ ಬೆಂಗಳೂರಿನಲ್ಲಿ ಬೌರಿಂಗ್ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ ಮುಂತಾದ ದೊಡ್ಡ ದೊಡ್ಡ ಆಸ್ಪತ್ರೆಗಳಿವೆ. ಅಲ್ಲಿ ಲಕ್ಷಗಟ್ಟಲೆ ಖರ್ಚುಮಾಡಿ ಬಹಳ ಅತ್ಯುತ್ತಮವಾದ ಆಧುನಿಕ ಉಪಕರಣಗಳನ್ನಿಟ್ಟು ಸತ್ತವನನ್ನು ಕೂಡ ಬದುಕಿಸಬಹುದು ಅನ್ನಿಸುವ ಹಾಗೆ ವ್ಯವಸ್ಥೆ ಮಾಡಿದ್ದರೂ ಜನರೇಕೆ ಆ ಆಸ್ಪತ್ರೆಗಳಿಗೆ ಹೋಗಲು ಹಿಂದುಮುಂದೆ ನೋಡುತ್ತಾರೆ ಎಂಬುದನ್ನು ಮಂತ್ರಿಗಳು ಸ್ವಲ್ಪ ವಿಚಾರ ಮಾಡಿ ನೋಡಬೇಕು. ಮತ್ತು ಈ ಅಭಿಪ್ರಾಯವನ್ನು ಹೋಗಲಾಡಿಸುವುದು ಈ ಎರಡು ಇಲಾಖೆಗಳ ಪ್ರಥಮ ಕರ್ತವ್ಯವಾಗಬೇಕು. ಇಲ್ಲದಿದ್ದರೆ ಅವು ಸೇವೆ ಮಾಡಿದಂತಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ.

ನಾನು ಜನರ ಸೇವೆ ಮಾಡಿ ಅವರನ್ನು ಬದುಕಿಸಬೇಕು ಎಂಬ ಆದರ್ಶ ಎಂ.ಬಿ.ಬಿ.ಎಸ್. ಓದಿದವರಿಗೂ, ಇಂಜನಿಯರಿಂಗ್ ಪಾಸ್ ಮಾಡಿದವರಿಗೆ ಈ ಹಣದಿಂದ ಉತ್ತಮ ಸೇತುವೆ ಕಟ್ಟಬೇಕು ಜನರ ಸೇವೆಸಲ್ಲಿಸಬೇಕು ಎನ್ನುವುದು ಬಹಳ ಮುಖ್ಯ. ಇದರಿಂದ ಒಂದು ಅನ್ಯೋನ್ಯತೆ ಬರುತ್ತದೆ. ಡಾಕ್ಟರ್ ಅಡಿಸ್‌ಸ್ಕಡ್ಡರ್ ಅನ್ನತಕ್ಕವರು ವೆಲ್ಲೂರು ಆಸ್ಪತ್ರೆ ಸ್ಥಾಪನೆ ಮಾಡಿದ ಆ ಮಹಾತಾಯಿ. ಒಂದು ವೇಳೆ ಚಿಕ್ಕಂದಿನಲ್ಲಿ, ಅವರ ತಂದೆಯಿಂದ ಹೆರಿಗೆಗಾಗಿ ಬಂದವರು, ಗಂಡಸರ ಹತ್ತಿರ ಹೆರಿಗೆ ಮಾಡಿಸಿಕೊಳ್ಳುವುದಿಲ್ಲ ಎಂದು ಹೇಳಿ ಗರ್ಭಿಣಿಸ್ತ್ರೀಯರು ಅವರ ತಂದೆಗೆ ಅವಕಾಶ ಕೊಡದೇ ಸತ್ತುಹೋದರು. ಅದನ್ನು ನೋಡಿ ಅಡಿಸ್‌ಸ್ಕಡ್ಡರ್ ತನ್ನದೇಶಕ್ಕೆ ಹೋಗಿತಾನೇ ಎಂ. ಬಿ. ಬಿ. ಎಸ್. ವೈದ್ಯಕೀಯ ಪರೀಕ್ಷೆ ಪಾಸ್ ಮಾಡಿ ಈ ದೇಶಕ್ಕೆ ಪುನಃ ಬಂದು, ಹಣವನ್ನು ಒಟ್ಟುಗೂಡಿಸಿ ಕಟ್ಟಿರತಕ್ಕ ವೆಲ್ಲೂರು ಆಸ್ಪತ್ರೆಯನ್ನು ಇವತ್ತು ತಾವೆಲ್ಲರೂ ನೋಡಬಹುದು. ತಾನೇ ಸ್ವತಃ ಹೆಣ್ಣುಮಕ್ಕಳಿಗೆ ವೈದ್ಯಕೀಯ ಕೊಡಬಹುದು ಎಂಬ ಆಕೆಯ ಆ ಒಂದು ಆದರ್ಶ ಏನಿದೆ ಅದು ನಮ್ಮ ಡಾಕ್ಟರುಗಳ ಕಣ್ಣುಮುಂದೆ ಇರಬೇಕು. ಅದು ಬಹಳ ಸಲ ಇರುವುದಿಲ್ಲ. ಅವರ ಇನ್‌ಕ್ರಿಮೆಂಟ್ ವಿಷಯ, ವರ್ಗದ ವಿಷಯ. ತಮ್ಮ ಸ್ಥಾನಮಾನದ ವಿಷಯ, ಏನು ಮಾಡಬೇಕು ಎನ್ನುವ ವಿಷಯ, ಮನುಷ್ಯ ಸಹಜವಾದ ಒಂದು ತಾಪತ್ರಯ ಇರುತ್ತದೆ. ಅವರಿಗೂ ಹೆಂಡತಿ ಮಕ್ಕಳು-ಮರಿ ಸಂಸಾರ ಇರುತ್ತದೆ. ಕೆಲವು ಮಟ್ಟಿನ ದುಡ್ಡಿನ ಆಶೆಯೂ ಬಂದಿರುತ್ತದೆ. ಮೆಡಿಕಲ್ ಸ್ಟೋರ್ಸ್ ಯಾವುದು ಎಷ್ಟು ಕೊಟ್ಟಿರುತ್ತಾರೆಯೋ ಅಷ್ಟೇ, ಆಯಿತು ಎಂಬ ಅಭಿಪ್ರಾಯ ಕೆಲವರಿಗೆ ಬರುತ್ತದೆ. ಇದು ಮಾನವ ಸಹಜವಾದ ಒಂದು ದೌರ್ಬಲ್ಯ ಎಂದು ಹೇಳಬಹುದು. ದೇಶದಲ್ಲಿ ಇಂಥಾ ಜನರನ್ನು ಇಟ್ಟು ಹಣವನ್ನು ಯಾರ ಸ್ವಾರ್ಥಕ್ಕೋ ಉಪಯೋಗಿಸಬಾರದು. ಡಾಕ್ಟರುಗಳು ಮತ್ತು ಅದರಲ್ಲೂ ರಾಜಕಾರಣಿಗಳು ಯಾರಿದ್ದಾರೆ ಅವರ ಕೈ ಶುದ್ಧವಾಗಿರಬೇಕು. ಸೇವಾ

ಮನೋಭಾವ ಇಟ್ಟು, ತನುಮನ ಧನ ಉಪಯೋಗಿಸಿ ಕೆಲಸಮಾಡಬೇಕೆಂದು ಜನ ಹೇಗೆ ನಿರೀಕ್ಷೆ ಮಾಡುತ್ತಾರೆಯೋ ಹಾಗೆ ತಾವೂ ಕೂಡ ಎಂದರೆ ಈ ದೇಶದ ವೈದ್ಯರೂ ಕೂಡ ಜನರ ಸೇವೆಯೇ ತಮ್ಮ ಜೀವನದ ಉದ್ದೇಶ ಅಂತ ಹೇಳಿ ಜೀವನವನ್ನೇ ಧಾರೆ ಎರೆದು ಈ ಕ್ಷೇತ್ರಕ್ಕೆ ಬಂದು ಕಾಲಿಟ್ಟ ಮೇಲೆ ಅವರು ತಮ್ಮ ಆದರ್ಶ ಮರೆಯ ಕೂಡದು. ಯಾವನೇ ಬರಲಿ ಅವನ ಖಾಯಿಲೆ ಅನುಸರಿಸಿ ಚಿಕಿತ್ಸೆ ಆಗಬೇಕೇ ಹೊರತು ದೊಡ್ಡವನು, ಸಣ್ಣವನು, ಯಾವ ಜಾತಿಯವನು ಎಂಬ ಭೇಧ ಭಾವ ತಾರತಮ್ಯ ಇಲ್ಲದೆ ಕೆಲಸಮಾಡಿ ನಮ್ಮ ಇಲಾಖೆಗೆ ಕೀರ್ತಿಯನ್ನು ತರುತ್ತಾರೆ ಎಂದು ಆಶಿಸುತ್ತೇನೆ.

ಈ ಎರಡು ಇಲಾಖೆಗಳನ್ನು ಒಂದು ಮಾಡತಕ್ಕ ಮಾತು ಬಹಳ ದಿವಸದಿಂದ ಇದೆ. ಡಾಕ್ಟರ್ ಆಳ್ವರವರು ಬಂದಮೇಲೆ ಆಶ್ವಾಸನ ಕೊಟ್ಟಿದ್ದಾರೆ. ಇದು ಮಾಡಿಯೇ ಮಾಡುತ್ತೇನೆ ಎಂದು ಆದರೆ ಕೆಲವುಕಾಲ ತೊಡರು ಬಂದಿದೆ ಎಂದು ಕೇಳುತ್ತೇನೆ. ಜನಾರೋಗ್ಯ ರಕ್ಷಣೆ ಅಧೀನದಲ್ಲಿ ವೈದ್ಯಕೀಯ ಇಲಾಖೆ ಕೆಲಸಮಾಡುವುದು ಎಲ್ಲಾ ದೇಶದಲ್ಲೂ ಇದೆ. ಇಲ್ಲೂ ಆಗಬೇಕಾದ್ದು ಅವಶ್ಯಕ. ಕೆಲವಾರು ಹುದ್ದೆಗಳಲ್ಲಿ ಹೆಚ್ಚು ಕಡಿಮೆ ಆಗಬಹುದು. ಹೇಗೆ ಅವರ ಕೆಳಗೆ ಕೆಲಸ ಮಾಡುವುದು ಎಂದು ಕಸವಿಸಿಯಾಗಬಹುದು. ಆದರೆ ಒಂದೇ ರೀತಿಯ ವ್ಯವಸ್ಥೆ ಇರಬೇಕು. ಮುಖ್ಯವಾಗಿ ಇವತ್ತು ಹೇಳುವುದಾದರೆ ಹಿಂದೆ ನಾವು ಯಾವ ಖಾಯಿಲೆ ಹೆಸರು ಕೇಳಿಯೇ ನಡುಗುತ್ತಾ ಇದ್ದೆವೋ ಕಾಲರಾ, ಪ್ಲೇಗು, ಇವೆಲ್ಲ ಇನ್‌ಫ್ಲುಯೆನ್‌ಜಾ ಇಂಥಾ ಅನೇಕ ಖಾಯಿಲೆಗಳು ಸ್ವಲ್ಪಮಟ್ಟಿಗೆ ಮೈಲ ಇಂಥಾ ಖಾಯಿಲೆಗಳನ್ನು ತಡೆಗಟ್ಟಲು ಜನಾರೋಗ್ಯ ರಕ್ಷಣೆ ಇಲಾಖೆಯವರು ಮಾಡಿರತಕ್ಕ ಕೆಲಸ ಕಾರ್ಯಗಳಿಂದ ಬಹಳವಾಗಿ ಕಡಿಮೆಯಾಗಿದೆ. ಬಹಳ ರೀತಿಯಲ್ಲಿ ಅವುಗಳನ್ನು ನಿರ್ಮೂಲನ ಮಾಡುವುದಕ್ಕೆ ಸಾಧ್ಯವಾಗಿದೆ ಎಂದು ಹೇಳಬಹುದು. ಇನ್ನು ಕೆಲವು ಖಾಯಿಲೆಗಳು ಇವೆ. ಸೊರಬದಲ್ಲಿ ಮಂಗನ ಖಾಯಿಲೆ ಎಂದು ಬರುತ್ತದೆ ವೈರಸ್‌ಯಿಂದ ಇವತ್ತು ಕೂಡ ಮೈಲಿ ವಿಷಯದಲ್ಲಿ ಡೀಮೆರೋ ಅವರು ವ್ಯಾಕ್ಸೀನ್‌ನಲ್ಲಿ ಏನೋ ತೊಂದರೆ ಇದ್ದಹಾಗೆ ಇದೆ ಎಂದು ಹೇಳಿದರು. ಬಿ.ಸಿ.ಜಿ. ವ್ಯಾಕ್ಸೀನ್ ಬಗ್ಗೆ ಕೂಡ ವಿವಾದ ಇದೆ. ಆದ್ದರಿಂದ ಜನಾರೋಗ್ಯ ರಕ್ಷಣೆಯ ಕೆಲಸ ಬಹಳ ಮುಖ್ಯವಾಗಿರುತ್ತದೆ. ಏಕೆಂದರೆ ಖಾಯಿಲೆ ಬರದಂತೆ ನೋಡಿಕೊಳ್ಳುವುದು ಬಹಳ ಮುಖ್ಯ. ಒಳ್ಳೆಯ ಆಹಾರ ಕೊಡಬೇಕು. ಖಾಯಿಲೆ ಬರದಂತೆ ತಡೆಗಟ್ಟಬೇಕು. ಒಂದು ವೇಳೆ ಅಕಸ್ಮಾತ್ತಾಗಿ ಖಾಯಿಲೆ ಬಂದರೆ ಚಿಕಿತ್ಸೆ ಕೊಡಬೇಕು. ಈ ಎರಡು ಇಲಾಖೆಗಳು ಬಹಳ ಮುಖ್ಯ ಹೆಲ್ತ್ ಇಲಾಖೆಯಿಂದ ಉಪಯೋಗವೇ ಇಲ್ಲ ಎಂಬ ಅಭಿಪ್ರಾಯ ಇದ್ದರೆ ಅದು ಸರಿಯಾದ ಅಭಿಪ್ರಾಯವಲ್ಲ. ಆದ್ದರಿಂದ ಈ ಎರಡು ಇಲಾಖೆಯನ್ನು ಒಟ್ಟಿಗೆ ಸೇರಿಸಿ ಒಂದು ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಹೆಲ್ತ್‌ಯುನಿಟ್ ಮಾಡುವಾಗ ಮೈಸೂರಿನವರ ಹೆಲ್ತ್ ಯುನಿಟ್ಟು, ಇಂಡಿಯಾ ಗವರ್ನಮೆಂಟಿನ ಹೆಲ್ತ್ ಯುನಿಟ್ಟು ಎಂದು ಮಾಡಿದ್ದಾರೆ G.O.I.P. ಪ್ಯಾಟರ್ನ್ ಅಂತ ಇದನ್ನೆಲ್ಲಾ ಕಡಿಮೆ ಮಾಡಿ ಒಂದು ಒಳ್ಳೆಯ ವ್ಯವಸ್ಥೆಮಾಡಬೇಕು. ಆಸ್ಪತ್ರೆಗಳಲ್ಲಿ ಕನಿಷ್ಟಪಕ್ಷ ಇಂಥಾ ಔಷಧಿ ಇರಬೇಕು ಎಂದು ಏನಿದೆಯೋ ಅದನ್ನೆಲ್ಲಾ ಇಡಬೇಕು,

ಇನ್ನೊಂದು ಮಾತು ಆಯುರ್ವೇದದ ಬಗ್ಗೆ ಮೊದಲಿನಿಂದಲೂ ಹೇಳುತ್ತಾ ಇದ್ದೇನೆ. ನಾನು ಆಯುರ್ವೇದದ ಪ್ರೇಮಿಯೇ : ಆಯುರ್ವೇದದ ಬಗ್ಗೆ, ಅಲೋಪಥಿ ಬಗ್ಗೆ, ಹೋಮಿಯೋಪಥಿ ಬಗ್ಗೆ, ಯುನಾನಿ ಬಗ್ಗೆ ಅವರವರಲ್ಲೇ ಅನೇಕ ರೀತಿಯ ಭಿನ್ನಾಭಿಪ್ರಾಯ ಇದೆ. ಅದನ್ನೆಲ್ಲಾ ಒಟ್ಟಿಗೆ ಸೇರಿಸಿ ಯಾವುದರಿಂದ ಹೆಚ್ಚು ಸುಲಭವಾಗಿ ಒಳ್ಳೆಯ ರೀತಿಯಲ್ಲಿ, ಪರಿಣಾಮಕಾರಿಯಾಗಿ ಗುಣವಾಗುತ್ತದೆಯೋ ಅದನ್ನು ಚೆನ್ನಾಗಿ ತಿಳಿದುಕೊಂಡು ಒಂದು ಇಂಟಿಗ್ರೇಟೆಡ್ ಸಿಸ್ಟಂ ಅಂತ ಹೇಳಬಹುದು. ಉತ್ತಮವಾದ ವೈದ್ಯ ಎಂದರೆ ಎಲ್ಲಾ ಗೊತ್ತಿರಬೇಕು. ಸಣ್ಣ ಉಗುರಿನಲ್ಲಿ ಹೋಗುವುದಕ್ಕೆ ದೊಡ್ಡ ಕೊಡಲಿ ತೆಗೆದುಕೊಳ್ಳದೆ ಇದ್ದಹಾಗೆ ನಮ್ಮ ದೇಶ ಬಡದೇಶ ಬಹಳ ಹಣವನ್ನು ಹೊರಗಿನಿಂದ ತರಿಸತಕ್ಕ ಔಷಧಿಗೆ ಖರ್ಚು ಮಾಡುತ್ತಾ ಇದ್ದೇವೆ. ನಾರುಬೇರಿನಿಂದ ಖಾಯಿಲೆ ಹೋಗುವುದಕ್ಕೆ ಔಷಧಿ ಬೇಕೆಂದರೆ 10 ರೂಪಾಯಿ ಅನ್ನುತ್ತಾನೆ. ಟಾನಿಕ್ ಅಂತ ಏನು ಹೇಳುತ್ತಾರೆ ಅದನ್ನು ಕಷಾಯದಲ್ಲಿ ಪಡೆದುಕೊಳ್ಳಬಹುದು. 8 ಆಣೆಯಲ್ಲಿ ವಾಸಿಯಾಗುವ ಖಾಯಿಲೆಗೆ 10 ರೂಪಾಯಿನ ಔಷಧಿ ಬರೆದುಕೊಡುತ್ತಾರೆ. ಬಡವನಿಗೆ ಅದು ಎಟಕುವುದಿಲ್ಲ. ಆದ್ದರಿಂದ ನಮ್ಮ ದೇಶೀಯ ಪದ್ಧತಿ ಏನಿದೆ ಅದರ ಬಗ್ಗೆ ಪರಿಣಾಮ ಮತ್ತು ಉಳಿತಾಯದ ವಿಷಯದಲ್ಲಿ ಯಾವ ಸಂದೇಹವೂ ಇಲ್ಲ. ಅಂಥಾ ಔಷಧಿಗಳನ್ನು ತಯಾರುಮಾಡುವುದು ಮತ್ತು ಅದಕ್ಕೆ ತಕ್ಕ ವೈದ್ಯಕೀಯ ವ್ಯವಸ್ಥೆ ಮಾಡುವುದೂ ಒಳ್ಳೆಯದೆಂದು ತಿಳಿದುಕೊಂಡಿದ್ದೇನೆ. ಡಾಕ್ಟರುಗಳ ಅಭಿಪ್ರಾಯ ಹೇಗಿದೆಯೋ ಗೊತ್ತಿಲ್ಲ. ಅವರು ಅಲೋಪಥಿಯವರು ಬೇರೆ ಪದ್ಧತಿಗಳ ಬಗ್ಗೆ ಬೇಸರ ಅಥವಾ ತಾತ್ಸಾರ ಇಲ್ಲದೇ ಇರಬಹುದು. ಆದ್ದರಿಂದ ಈ ವಿಷಯವನ್ನು ಪರಿಶೀಲಿಸಬೇಕೆಂದು ಹೇಳಿ ಅವರನ್ನು ಕೇಳಿಕೊಂಡು ನನ್ನ ಎರಡು ಮಾತನ್ನು ಮುಗಿಸುತ್ತೇನೆ.

Sri M. GHOUSE MOHIUDDIN (Raichur).—Mr. Speaker Sir, I am grateful to you for granting me a chance at least today.

Sir, human life is precious. Every State is bound to provide facilities for medical as well as public health. This Demand has been debated since two days. So, it is not necessary for me to elaborate more. But one point I will put up. Our country, India, consists of population living in villages only. There are few cities and towns. Majority of population resides in villages. From this point of view, we have to see that arrangements for medical and public health are made and what facilities they have provided for this population living in the villages. At the headquarters of the districts, there are hospitals and in cities there are several hospitals. These hospitals at the district level are not fully equipped. There are no facilities and amenities for them. At the level of the taluka, there are no doubt hospitals, but there are no meternity homes. It is necessary to establish maternity homes at every taluka so that all the villagers of that taluka may have the facility of maternity home.

In like manner, at the headquarters of a Panchayet, there must be one dispensary to serve all the villages that come under that Panchayet. Sir, last year, there was one Cess Bill which was passed in this House and at that time the Hon'ble Minister for Finance assured us that the income derived through that Cess would be solely provided for medical and public health facilities to all the villages. Now, we have to see as to how far this promise has been implemented by Medical and Health Departments.

Sir, besides all party there are two systems of medicines called Ayurvedic and Unani and these are very cheap. But we are sorry to see that these two systems are not duly encouraged by Government. For instance, at Raichur there is one Unani Dispensary. The population of Raichur is 80,000. But, you will be surprised to know that the provision made for that dispensary is only one rupee per day and the medicines are supplied from Bangalore which are not genuine medicine. The Unani Hakim complains that some medicines which ought to be prepared with honey are prepared with jaggery. If jaggery is used for the preparation instead of honey, what effect it would have may just be imagined. All this is because there are no separate Directorates. So, it is necessary that a separate Directory is constituted for these two systems.

Sir, I want to point out one important thing in this connection and I request the Hon'ble Chief Minister to kindly take note of this. Sir, according to the Fazal Ali Commission, States were reorganised mostly on linguistic basis. But what is happening now in regard to human treatment is the point which I would like to bring to the notice of the House and the Chief Minister. Sir, recently, a girl suffering from bone T. B. was taken to Hyderabad hospital. She was not admitted there because she belonged to Mysore State. This is the inhuman attitude that is developing in some hospitals in the States. Because a patient belongs to another State, it should not be a bar for the admission of that

patient to any hospital of any State. This is a point to be tackled at the State level and I request the Hon'ble Chief Minister to please look into this question.

Sri C. J. MUCKANNAPPA.—Is there anything in the S.R.C. Repor' about this?

Sri M. GHOUSE MOHIUDDIN.—No; but that is the feeling create as a result of the States Reorganisation. Then, Sir, I would be failing in my duty if I do not bring some of the affairs of the Raichur Dispensary. There was a Doctor by name Dr. Rama Rao and there were so many complaints about him. He was the District Surgeon.

Sri C. J. MUCKANNAPPA.—Sir, there is a ruling that name of a particular individual should not be dragged here. What is the complaint? Is it corruption or nepotism?

Sri M. GHOUSE MOHIUDDIN.—Corruption, nepotism and ill-treatment and so many allegations.

Sri K. NAGAPPA ALVA (Minister for Health).—Enquiry was held, Sir.

Sri M. GHOUSE MOHIUDDIN.—As far as I know, no officer came there for any enquiry. But, he was transferred and we are glad for that. But, another District Surgeon is thrust on our heads (laughter). Ever-since he came, the public have so many grievances which I will enumerate. Sir, the designation of that person is District Surgeon but he is a raw hand in operation. I will give an instance. For tonsil operation three girls of the age of 10 and 11 were taken to him and every girl was very anxious that she should be operated first. One girl was taken for operation and when he conducted the operation for tonsil the girl expired there itself. The other two girls ran away. He has conducted so many operations and all of them have failed. About the administration of that dispensary, I will give one instance. There was a patient in the hospital and he died; he was a villager. The body was kept in the mortuary room. According to rule, the body should be kept in the mortuary room for three days. The next day a man came to inquire about the patient and he was informed that he expired and the body was kept in the mortuary room and that the same may be removed. He said that he was alone and he would go to the village and bring some more persons to remove the dead body. After twelve days there was a murder case and that dead body was brought for post-mortem to the mortuary room. When they put this dead body on the table, they found that there was another dead body lying there. Then, they recollected that they had kept the dead body of the villager there. The police was informed in the night. It was not possible for the police to take the dead body then. So, in the morning the Sub-Inspector of Somwarpet Police Station went to the Hospital but the body could not be removed as it was decomposed and lot of foul smell was eminating from it He was a clever S.I. He spent three rupees from his pocket and gave drinks to some people and got the body removed. In a drunken state, they took the dead body from the mortuary.

Mr. CHAIRMAN.—Now the House will rise for half-an-hour and meet again at 3-30 P.M.

The House adjourned for recess at Three of the Clock and re-assembled at Thirty Minutes past Three of the Clock.

[MR. CHAIRMAN (SRI M. SREENIVASA NAYAK) in the Chair]

Sri M. GHOUSE MOHIUDDIN.—Sir, I was speaking about the dead body which was kept in mortuary room of Raichur dispensary for 12 days. This matter was reported in 'Lokvani', a Kannada weekly of Raichur District and the 'Blitz' of Bombay. I myself sent a report to the Hon. Minister for Health, the Chief Minister and the Director of Medical Services. To the extent I am aware, no action has been taken. The District Surgeon is still working in Raichur.

About this District Surgeon working at Raichur, I have much to say. Women of any caste do not like to expose their bodies naked before any man. But in some cases she has to expose her body, say, before a doctor for an operation. At Raichur there are 2 lady doctors, One is a qualified, M.B.B.S lady doctor who conducts operations. Whenever she conducts operations on women, this District Surgeon is in the habit of going into the operation theatre. To this attitude of the District Surgeon, the people of Raichur have expressed resentment and objections. Why should he go there unnecessarily when his services are not needed ? Again, Government supplies good quantities of medicines to all hospitals but in Raichur we have complaint. The District Surgeon does not supply the medicines from the stores. Some of the medicines become time-barred. I came to know all these from some sources.

I would like the Hon. Minister for Health to investigate some aspects of the past career of this gentleman. Why he returned from England without acquiring any qualifications; why he could not remain in Tumkur for more than three months, what was the protest at Karwar about him ?

Sri NAGAPPA ALVA.—An inquiry has been held. Another inquiry is being conducted about this person.

Sri GHOUSE MOHIUDDIN.—In this connection, the Director of Medical Services came to Raichur. He did not send his programme beforehand. On 22nd he sent a letter to me saying that I could see him on 22nd and 24th. That letter was also sent to Agadi Sanganna, Ex-M.P., Srimati Basavarajeswari, M.L.A and Siddaramappa-Patil. It shows that all these people have sent complaints about this D.S. As the Chief Minister came for a function on 22nd I went to see the Director on 24th morning. I was asked to see him at the hospital. I went there and waited for 20 minutes but as he did not turn up, I want to know what steps have been taken by the higher authorities in respect of the complaints made by me and other distinguished persons of that place.

I request the Hon. Minister for Health to consider my suggestion for establishing an outpatient dispensary at Raichur Town. The new building which has been constructed is very far away from Raichur town. It is more than 2 miles from certain areas in Raichur town and in some cases it is 3 miles away. No action has been taken in this regard.

These dispensaries are meant for the poor people but in practice we find poor people are not wanted there. The Hyderabad Karnatak area is backward in medical facilities and I request the Government to provide more medical amenitities in this area.

† ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಅಧ್ಯಕ್ಷರೇ, ರಾಜ್ಯದ ಆರೋಗ್ಯ ಮಂತ್ರಿಗಳು ಈ ಸಭೆಯಮುಂದೆ ಇಟ್ಟ ವೈದ್ಯಕೀಯ ಹಾಗೂ ಜನಾರೋಗ್ಯ ರಕ್ಷಣೆಯ ಬೇಡಿಕೆಗಳನ್ನು ಸ್ವಾಗತಿಸಿ, ಈ ಸಮಯದಲ್ಲಿ ಸರ್ಕಾರಕ್ಕೆ ಒಂದೆರಡು ಸಲಹೆಗಳನ್ನು ಮಾಡಲು ಅಪೇಕ್ಷಿಸುತ್ತೇನೆ, ಸರ್ಕಾರದವರು ಜನಾರೋಗ್ಯ ರಕ್ಷಣೆಯ ಸಲುವಾಗಿ ಸಾಕಷ್ಟು ಪ್ರಚಾರವನ್ನು ಕೈಕೊಳ್ಳುವುದು ನಮ್ಮೆಲ್ಲರಿಗೂ ತಿಳಿದ ವಿಷಯ. ಆ ಪ್ರಚಾರದಂತೆ ಇವೊತ್ತು ಕಾರ್ಯಗತ ಮಾಡಲಿಕ್ಕೆ ವಿಳಂಬ ವಾಗುವುದನ್ನು ನೋಡಿ ಅದಕ್ಕೆ ವಿಷಾದ ಪಡಬೇಕಾಗಿದೆ. ಸರ್ಕಾರ ಸಾಕಷ್ಟು ಹಣವನ್ನು ಇವೊತ್ತಿನ ದಿವಸ ಜನಾರೋಗ್ಯ ರಕ್ಷಣೆಯ ಸಲುವಾಗಿ ಇಟ್ಟಿದೆ. ಆ ಹಣವನ್ನು ಹೇಗೆ ಉಪಯೋಗ ಮಾಡಬೇಕು ಎನ್ನುವುದನ್ನು ಅಲ್ಲಿಯ ಆಡಳಿತ ವರ್ಗದವರು ಸರಿಯಾಗಿ ಮಾಡುತ್ತಿಲ್ಲವೆಂದು ಸರ್ಕಾರಕ್ಕೆ ಹೇಳಬಯಸುತ್ತೇನೆ.

ಸರ್ಕಾರದವರು ಹಳ್ಳಿಯವರಿಗೆ ಸರಿಯಾದ ಔಷಧೋಪಚಾರ ಸಿಕ್ಕಲೆಂದು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡಿ ಅದರ ಮುಖಾಂತರವಾಗಿ ಔಷಧಿಗಳನ್ನು ಒದಗಿಸಬೇಕೆಂಬ ಹವ್ಯಾಸವನ್ನಿಟ್ಟುಕೊಂಡಿದ್ದಾರೆ. ಆದರೆ ಎಷ್ಟು ಆರೋಗ್ಯ ಕೇಂದ್ರಗಳಲ್ಲಿ ಡಾಕ್ಟರುಗಳು, ನರ್ಸ್‌ಗಳು, ಹೆಲ್ತ್ ವಿಸಿಟರುಗಳು ಇದ್ದಾರೆನ್ನುವುದು ವಿಚಾರ ಮಾಡತಕ್ಕ ಸಂಗತಿ. ಸಾಕಷ್ಟು ಆರೋಗ್ಯ ಕೇಂದ್ರಗಳಲ್ಲಿ ಡಾಕ್ಟರಿದ್ದ ಕಡೆ ಉಳಿದ ಸಿಬ್ಬಂದಿಯಿಲ್ಲ ; ಉಳಿದ ಸಿಬ್ಬಂದಿ ಇದ್ದರೆ ಡಾಕ್ಟರುಗಳಿಲ್ಲ. ಈ ತೆರನಾದ ಪರಿಸ್ಥಿತಿ ಬಂದಿದೆ. ಇದಕ್ಕಾಗಿ ಆದಷ್ಟು ಹೆಚ್ಚಿಗೆ ಡಾಕ್ಟರುಗಳನ್ನು ಒದಗಿಸಲೇ ಬೇಕಾಗಿದೆ. ಆರೋಗ್ಯ ಕೇಂದ್ರಗಳನ್ನು ತೆರೆದು ಅದರ ಮುಖಾಂತರ ಸವಲತ್ತುಗಳನ್ನು ಒದಗಿಸಬೇಕೆಂದು ಸರ್ಕಾರಕ್ಕೆ ಈ ಸಮಯದಲ್ಲಿ ಹೇಳುತ್ತೇನೆ. ಆರೋಗ್ಯ ಕೇಂದ್ರಗಳನ್ನು ಕೊಡಬೇಕಾದರೆ 15 ಸಾವಿರ ಜನಸಂಖ್ಯೆ ಇರಬೇಕು ಎಂದು ಯೋಜನೆಯನ್ನಿಟ್ಟುಕೊಂಡಿದ್ದಾರೆ. ಮತ್ತು ಹೊಸದಾಗಿ ಯಾರಾದರೂ ಆರೋಗ್ಯ ಕೇಂದ್ರಗಳನ್ನು ಕೇಳಿದಾಗ ಅವರು 17 ಸಾವಿರ recurring ಮತ್ತು 17½ ಸಾವಿರ ರೂಪಾಯಿ non-recurring charges ಯಾರು ಕೊಡುತ್ತಾರೆಯೋ ಅಂಥವರಿಗೆ ಮಾತ್ರ ಆರೋಗ್ಯ ಕೇಂದ್ರಗಳನ್ನು ಕೊಡಬೇಕೆಂದು ಮಾಡಿದ್ದಾರೆ. ಆದರೆ ಇವೊತ್ತಿನ ದಿವಸ ತಾಲ್ಲೂಕು ಬೋರ್ಡಿನವರು ಕೂಡ ಭಾಗವಹಿಸುವ ಪರಿಸ್ಥಿತಿಯೊಳಗೆ ಇಲ್ಲ. ತಾಲ್ಲೂಕು ಬೋರ್ಡಿನಲ್ಲಿ ಹಣ ಕಡಮೆಬಂದಾಗ ಯಾವ ರೀತಿ ಈ ಕೇಂದ್ರಗಳನ್ನು ನಡೆಸಬೇಕೆನ್ನುವುದು ತಿಳಿಯದಾಗಿದೆ.

ಬೊಂಬಾಯಿ ಕರ್ಣಾಟಕದ ಬಗ್ಗೆ ಹೇಳುವುದಾದರೆ ಅಲ್ಲಿ ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ಕೇಂದ್ರವಿದೆ. ಮತ್ತೊಂದು ಕೇಂದ್ರವನ್ನು ಸ್ಥಾಪನೆ ಮಾಡಬೇಕು ಎಂದರೆ ಹಣವಿಲ್ಲವೆಂದು ಕೂಡ ತಕ್ಕ ಪರಿಸ್ಥಿತಿ ಬಂದಿದೆ

ಬೊಂಬಾಯಿ ಕರ್ಣಾಟಕ ಭಾಗದಲ್ಲಿ ನಾಲ್ಕೈದು ಹಳ್ಳಿಗಳನ್ನು ಜೋಡಿಸಿ S.M.P. centres ಎಂದು ತೆಗೆದು ಒಂದು ರೀತಿ ಮಾಡಿದ್ದಾರೆ. ಅವು ಅತ್ಯುತ್ತಮವಾಗಿ ಕೆಲಸ ಮಾಡಿಕೊಂಡು ಬಂದಿವೆ ಎಂದು ನನ್ನ ಅನುಭವವಿದೆ. ಈ ಕೇಂದ್ರಗಳಿಗೆ ಆಯುರ್ವೇದ ಡಾಕ್ಟರುಗಳನ್ನು ಹಾಕಿ ಅದಕ್ಕೆ ಸಂಬಂಧಪಟ್ಟಂತೆ 300-400 ರೂಪಾಯಿ ಆಯುರ್ವೇದ ಔಷಧಿಗಳನ್ನು ಸಪ್ಲೈ ಮಾಡುತ್ತ ಬಂದಿದ್ದಾರೆ. ಈ S.M.P. Cntres ನಲ್ಲಿರುವ ಆಯುರ್ವೇದ ವೈದ್ಯರಿಗೆ ಅಲೋಪಥಿಯಲ್ಲಿ ಮೂರು ನಾಲ್ಕು ತಿಂಗಳು ಟ್ರೈನಿಂಗ್ ಕೊಟ್ಟು ಅವರಿಗೆ ನೂತನ ಔಷಧಿ ಸಾಮಗ್ರಿಗಳನ್ನು ಒದಗಿಸಲು ಸರ್ಕಾರ ಪ್ರಯತ್ನ ಮಾಡಿದರೆ ಡಾಕ್ಟರುಗಳ ಅಭಾವ ಕಡಮೆಯಾಗಬಹುದು ಎಂದು ನಾನು ಸೂಚನೆ ಮಾಡಬಯಸುತ್ತೇನೆ.

S.M.P. ಸೆಂಟರ್‌ಗಳನ್ನು ಪ್ರತಿಯೊಂದು ಕಡೆಯೂ ತೆಗೆದು ಡಾಕ್ಟರನ್ನು ಪೋಸ್ಟ್ ಮಾಡಿ ವೈದ್ಯಕೀಯ ಸೌಲಭ್ಯವನ್ನು ಒದಗಿಸಿಕೊಡಬೇಕು.

ಪ್ರೈಮರಿ ಹೆಲ್ತ್ ಸೆಂಟರುಗಳ ಬಗ್ಗೆ ಒಂದೆರಡು ವಿಷಯ ಹೇಳಬೇಕೆಂದರೆ ಅಲ್ಲಿ ಕೆಲಸ ಮಾಡುವ ಡಾಕ್ಟರು ಮುಂಜಾನೆ ಆಸ್ಪತ್ರೆಯಲ್ಲಿದ್ದು, ಮಧ್ಯಾಹ್ನ ಜೀಪಿನಲ್ಲಿ ಹಳ್ಳಿಗಳಿಗೆ ಹೋಗಿ ಸಂದರ್ಶಿಸಿ ಕೊಂಡು ಬರತಕ್ಕ ಪರಿಸ್ಥಿತಿ ಇದೆ. ಈ ಪ್ರಾಥಮಿಕ ಹೆಲ್ತ್ ಯೂನಿಟ್ಟಿಗೆ ಸಂಬಂಧಿಸಿದ ಸಿಬ್ಬಂದಿ

(ಶ್ರೀ ಸಿದ್ದಯ್ಯ ಕಾಶೀಮಠ)

20 ಸಾವಿರ ಜನಸಂಖ್ಯೆಗೆ ಒಳಪಡುವ ಹಳ್ಳಿಗಳಿಗೆ ಭೇಟಿಕೊಡತಕ್ಕ ವಿಚಾರದಲ್ಲಿ ಕೆಲವೊಂದು ಸಲಹೆಗಳನ್ನು ಕೊಡಬೇಕೆಂದಿದ್ದೇನೆ.

ಇದರಿಂದ ಏನಾಗಿದೆ ಎಂದರೆ ಹಾಸ್ಪಿಟಲ್ಲುಗಳಲ್ಲಿ ಡಾಕ್ಟರುಗಳಿಲ್ಲದಂತಾಗಿದೆ. ಅದಕ್ಕಾಗಿ ಇಂತಹ ಹಾಸ್ಪಿಟಲ್ಲುಗಳಲ್ಲಿ ಒಬ್ಬೊಬ್ಬರು ಅಸಿಸ್ಟೆಂಟರುಗಳನ್ನಾದರೂ ನೇಮಕ ಮಾಡಿದರೆ, ಡಾಕ್ಟರುಗಳಿಲ್ಲದಿದ್ದರೂ ಅಲ್ಲಿಗೆ ಬಂದಂತಹ ಜನಗಳಿಗೆ ಇಂತಹ ಅಸಿಸ್ಟೆಂಟರುಗಳಿಂದ ಅನುಕೂಲವಾಗುತ್ತದೆ. ಇದರ ಬಗ್ಗೆ ಸರಕಾರ ಯೋಚನೆ ಮಾಡಬೇಕು.

ಪ್ರೈಮರಿ ಹೆಲ್ತ್ ಯೂನಿಟ್ಟುಗಳಲ್ಲಿರುವ ಆಸ್ಪತ್ರೆಗಳಿಗೆ ಔಷಧಿಗಳನ್ನು ಒದಗಿಸತಕ್ಕ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಈ ಆಸ್ಪತ್ರೆಗಳಿಂದ ಔಷಧಿಗಳಿಗಾಗಿ ಇಂಡೆಂಟನ್ನು ಕಳುಹಿಸಿದರೆ, ನಿರ್ದಿಷ್ಟವಾದ ಔಷಧಿಗಳನ್ನು ಕೊಳ್ಳಬೇಕಾದರೆ ಸರ್ಕಾರದಿಂದ ಮನ್ನಣೆ ಪಡೆದಂತಹ ಸ್ಟೋರುಗಳಿಂದಲೇ ಈ ಔಷಧಿಗಳನ್ನು ಕೊಳ್ಳಬೇಕೆಂದು ಮಾಡಿದ್ದಾರೆ. ಇವೊತ್ತಿನ ದಿವಸ ನಮ್ಮ ಬಿಜಾಪುರ ಜಿಲ್ಲೆಗೆ ಔಷಧಿ ಬೇಕಾದರೆ ಬೆಂಗಳೂರಿನಲ್ಲಿರುವ ಮನ್ನಣೆ ಪಡೆದಂತಹ ಸ್ಟೋರುಗಳಿಗ ಬಂದು ಔಷಧಿಗಳನ್ನು ಕೊಂಡುಕೊಳ್ಳಬೇಕಾದರೆ ಬಹಳ ಕಷ್ಟವಾಗುತ್ತದೆ. ಅಲ್ಲದೆ ಕೆಲವು ವೇಳೆ ಇಲ್ಲಿಂದ ಇಂಡೆಂಟು ಕಳುಹಿಸುವ ಔಷಧಿಗಳೂ ಅಂತಹ ಸಮಯದಲ್ಲಿ ಸಿಗುವುದಿಲ್ಲ ಇದರಿಂದ ರೋಗವನ್ನು ವಾಸಿ ಮಾಡಲು ಅನುಕೂಲವಾದ ಔಷಧಿಗಳೂ ಸಿಗುವುದಿಲ್ಲ. ಅದಕ್ಕಾಗಿ ಆದಷ್ಟು ಮಟ್ಟಿಗೆ ಆಯಾ ಜಿಲ್ಲೆಗೆ ಸಂಬಂಧಪಟ್ಟಂತೆ ಹತ್ತಿರವಿರುವ ಊರುಗಳಲ್ಲಿ ಮನ್ನಣೆ ಪಡೆದಂತಹ ಸ್ಟೋರ್ಸುಗಳನ್ನು ತೆರೆದು ಅಲ್ಲಿಂದ ಸರಳವಾಗಿ ಮತ್ತು ಸುಲಭವಾಗಿ ಔಷಧಿಗಳು ದೊರೆಯುವಂತೆ ಮಾಡಿದರೆ, ಇಂತಹ ತೊಂದರೆಗಳು, ಅನಾನುಕೂಲಗಳು ತಪ್ಪುತ್ತವೆ ಎಂದು ಈ ಸಮಯದಲ್ಲಿ ಹೇಳುತ್ತೇನೆ.

